ಸಂಪುಟ : 8 ಸಂಚಿಕೆ : 229 ಪುಟ : 4 ಬೆಲೆ : 3.00 ಮಂಗಳವಾರ ಅಕ್ಟೋಬರ್ 17, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 229 Pages : 4 Price : 3.00 Tuesday October 17, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 17 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 29 ಚಂದಾವರಿ ಲೈನ್, ಗುಂಪಿನ ಲೈನ್, ಭಾಂಡಗೆ ಲೈನ್, ಸುಡಗಾಡ ಸಿದ್ದರ ಓಣಿ, ವಾರ್ಡ್ ನಂ. 14 ಹಣಗಿ ಜೀನ್ ಭಾಗ 1,2, ಮುಂಡರಗಿ ಲೈನ್, ಕುರುಡಗಿ ಲೈನ್, ವೆಂಕಟೇಶ್ ಟಾಕೀಸ್ ಲೈನ್, ಜನತಾ ಗೌಡರ ಲೈನ್, ಕೊಣ್ಣೂರ ಲೈನ್, ಮಣಿಕಂಠ ಹೋಟೆಲ್ ಲೈನ್, ಬಿ ಕೆ ಮಾಸ್ತರ್ ಲೈನ್, ಕಾಮಾಜಿ ಯವರ ಲೈನ್, ಹೊಸ ಅಂಗಡಿ ಲೈನ್, ಹೊಸಮನಿ ವಕೀಲರ ಲೈನ್, ಕಟ್ಟಿಮನೆಯವರ ಲೈನ್, ಅಂಗಡಿ ವಕೀಲರ ಲೈನ್, ಗುಗ್ಗರಿಯವರ ಲೈನ್, ಹಾದಿಮನಿ ವಕೀಲರ ಲೈನ್, ಮಟ್ಟಿ ವಕೀಲರ ಲೈನ್, ಪವರ್ ಶೆಟ್ಟರ್ ಲೈನ್, ಶಾಂತಿಗೇರಿ ಅವರ ಲೈನ್, ಶಿರೋಳ ಡಾಕ್ಟರ್ ಲೈನ್, ಸೋನಿ ಅವರ ಲೈನ್, ವಿಜಯಶೆಟ್ಟರ್ ಲೈನ್, ಕೆ ಸಿ ರಾಣಿ ರೋಡ್, ಪತ್ತೆಪೂರ ಲೈನ್, ತಡಿಯವರ ಲೈನ್, ಹೆಡ್ ಪೋಸ್ಟ್ ಲೈನ್, ಕಾರಂತ ಡಾಕ್ಟರ್ ಲೈನ್, ಕಟಗಿಯವರ ಲೈನ್, ವಕೀಲ ಚಾಳ, ಗೌಸ್ ಬಿಲ್ಡಿಂಗ್ ಕೆಲವು ಭಾಗಗಳು,

ವಾರ್ಡ್ ನಂ. 22 ಗಂಗಿಮಡಿ ಕನ್ನಡ ಶಾಲೆ 2 ಭಾಗಗಳು. ವಾರ್ಡ್ ನಂ. 30, 34 ವಡ್ಡರ ಗೇರಿ, ಮೂರು ಶಿಳ್ಳಿನ ವಕಾರ, ಕುಂಚಿ ಕೊರವರ ಓಣಿ, ವಡ್ಡರಗೇರಿಯ 3 ಭಾಗಗಳು ಬಸ್ ಡಿಪೋ ಹಿಂದಿನ ಭಾಗ, ಗಾರ್ಡನ್ ಸುತ್ತಮುತ್ತ, ಬಸವೇಶ್ವರ ಸ್ಕೂಲ್ ಹಿಂದಿನ ಭಾಗ, 46ನೇ ಪ್ಲಾಟ್ 1ನೇ ರೋಡ್ ಲೈನ್, ವಾರ್ಡ್ ನಂ. 12,13,28 ಆನಂದ ಕಾರ್ಕಳ ಅವರ ಲೈನ್, ಗಣಪತಿ ಗುಡಿ ಹಿಂದಿನ ಲೈನ್, ವಿಜಯ ಕಾಂಪ್ಲೆಕ್ಸ್ ಲೈನ್, ಇಟಗಿಯವರ ಲೈನ್, ತೋಫಿಯಾರ ಲೈನ್, ಜಾಧವರ 3ನೇ ಕ್ರಾಸ್, ಉದ್ದಾರ ಮಾಸ್ತರ್ 3ನೇ ಕ್ರಾಸ್, ಉಪ್ಪಿನವರ ಲೈನ್, ಘೋಡಭಾಯಿ ಡಾಕ್ಟರ್ ಲೈನ್, ಶಿವನಗುತ್ತಿ ಲೈನ್, ಹಬಸೂರ ಲೈನ್, ಅಂಗಡಿಯವರ ಲೈನ್

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ .

### ಕಮಿಷನ್ ಪಡೆದು ಬೆಳೆ ವಿಮೆ ಮಾಡಿಸುತ್ತಿರುವ ಏಜೆಂಟರು । ನೇರವಾಗಿ ವಿಮೆ ಪಾವತಿಸಿದವರಿಗಿಲ್ಲ ಹಣ!

# ರೈತರ ಬೆಳೆ ವಿಮೆ ಮಾಡಿಸಲು ಏಜೆಂಟರ ಹಾವಳಿ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಅನ್ನದಾತ, ದೇಶದ ಬೆನ್ನೆಲುಬು ಎನಿಸಿಕೊಂಡ ರೈತರಿಗೆ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಲೇ ಇದೆ. ಒಂದೆಡೆ ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆಯೆಲ್ಲಾ ಹಾಳಾಗಿ ನಷ್ಟ ಅನುಭವಿಸುವಂತಾದರೆ, ಪ್ರಸಕ್ತ ವರ್ಷ ಮಳೆ ಇಲ್ಲದೆ ಬರ ಆವರಿಸಿದೆ. ಕಳೆದ ವರ್ಷ ಬಿದ್ದ ಬರೆಯಿಂದಲೇ ಚೇತರಿಸಿಕೊಳ್ಳಲಾಗದ ಅನ್ನದಾತ, ಸರ್ಕಾರದ ಸೌಲಭ್ಯಗಳಿಂದಲೂ ವಂಚಿತನಾಗುತ್ತಿದ್ದಾನೆ. 2022-23ರ ಸಾಲಿನ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯ ಹಣ ಇಲ್ಲಿನ ಸಾವಿರಾರು ರೈತರಿಗೆ ಸಿಗದಂತಾಗಿದೆ. ರೈತರು ಬ್ಯಾಂಕಿನಲ್ಲಿ ಪಡೆದ ಬೆಳೆ ಸಾಲ ಹಾಗೂ ತಾವೇ ತುಂಬಿದ ಬೆಳೆ ವಿಮೆಯೂ ಬರದೇ ರೈತರು ಬ್ಯಾಂಕಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.



ರೈತರ ಬೆಳೆ ವಿಮೆ ಮಾಡಿಸಲು ಏಜೆಂಟ್‌ಗಳು ಹುಟ್ಟಿಕೊಂಡಿದ್ದು, ಇವರು ಇದನ್ನೇ ಒಂದು ಉದ್ಯೋಗವನ್ನು ಮಾಡಿಕೊಂಡು ರೈತರ ಕಾಗದಗಳನ್ನು ಸಂಗ್ರಹಿಸುವುದು ಮತ್ತು ಹಣ ಬಂದ ಕೂಡಲೇ ರೈತರ ಬಳಿ ಹೋಗಿ ತಮ್ಮ ಪಾಲು ಪಡೆಯುವ ಕೆಲಸ ಮಾಡುತ್ತಿದ್ದಾರೆ. ರೈತರು ತಮ್ಮ ಆಧಾರ್ ಕಾರ್ಡ್, ಜಮೀನಿನ ಪಹಣಿ ಹಾಗೂ ಬ್ಯಾಂಕ್ ಪಾಸ್‌ಬುಕ್ ಸೇರಿದಂತೆ ಇನ್ನಿತರ ದಾಖಲೆಗಳನ್ನು ಏಜೆಂಟ್ ಬಳಿ ನೀಡಿದರೆ ಅವರೇ ಬೆಳೆ ವಿಮೆ ತುಂಬಿ ವಿಮೆ ಬಂದ ತಕ್ಷಣ ಅರ್ಧದಷ್ಟು ಹಣ ಅವರಿಗೆ ನೀಡುವ ಕರಾರು ಮಾಡಿಕೊಂಡ ರೈತರಿಗೆ ಮಾತ್ರ ಬೆಳೆ ವಿಮೆ ಜಮೆ ಆಗಿದ್ದು, ಏಜೆಂಟ್ ಇಲ್ಲದೇ ಹಣ ತುಂಬಿದವರಿಗೆ ಬೆಳೆ ವಿಮೆ ಬಾರದಿರುವುದು ರೈತರಲ್ಲಿ ಅನುಮಾನ ಮೂಡಿಸಿದೆ. ಏಜೆಂಟ್ ಹಾಗೂ ವಿಮೆ ಕಂಪನಿಯವರ ನಡುವೆ ಹೊಂದಾಣಿಕೆಯೇರ್ಪಟ್ಟಿದ್ದು ಇದಕ್ಕೆ ಕಾರಣವೆನ್ನಲಾಗುತ್ತಿದೆ.

ಪ್ರಸಕ್ತ ವರ್ಷ ಹತ್ತಿ, ಶೇಂಗಾ, ಗೋವಿನಜೋಳ, ನವಣೆ, ಈರುಳ್ಳಿ, ಭತ್ತ, ಮೆಣಸಿನಕಾಯಿ, ಎಳ್ಳು, ತೊಗರಿ, ಸಜ್ಜೆ, ಕೆಂಪು ಜೋಳ, ಸೂರ್ಯಕಾಂತಿ ಬೆಳೆಗಳಿಗೆ ಬೆಳೆ ವಿಮೆ ತುಂಬಿದ್ದು, ಮಳೆ ಕೊರತೆಯಿಂದ ಎಲ್ಲಾ ಬೆಳೆ ಹಾಳಾಗಿದೆ. ಏಜೆಂಟ್ ಮೂಲಕ ಬೆಳೆ ವಿಮೆ ತುಂಬಿದ ರೈತರಿಗೆ ಮಾತ್ರ ವಿಮೆ ದೊರೆತಿದ್ದು, 2022-23ರ ಸಾಲಿನಲ್ಲಿ ಜಿಲ್ಲೆಯಲ್ಲಿ ಅಂದಾಜು 75-80 ಸಾವಿರ ರೈತರು ಫಸಲ್ ಭಿಮಾ ಯೋಜನೆಗೆ ಹಣ ಭರಿಸಿದ್ದರು ಎನ್ನಲಾಗುತ್ತಿದೆ. ಮಳೆಯಾಶ್ರಿತ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆದವರೂ ಸಹ ಇದರಲ್ಲಿ ಸೇರಿದ್ದರು. ಕಳೆದ ವರ್ಷ ಫಸಲ್ ಭಿಮಾ ಯೋಜನೆಗೆ ಹಣ ಭರಿಸಿದ ಕೆಲವು ಜನರಿಗೆ ಮಾತ್ರ ಪರಿಹಾರ ನೀಡಲಾಗಿದೆ. ಆದರೆ ಇನ್ನುಳಿದ ರೈತರಿಗೆ ಇಲ್ಲಿಯವರೆಗೂ ಪರಿಹಾರ ಹಣ ಕೈಸೇರಿಲ್ಲ. ಫಸಲ್ ಭಿಮಾ ಯೋಜನೆಗಾಗಿ ಸಾಲ-ಸೋಲ ಮಾಡಿ ಹಣ ಭರಿಸಿದ್ದೇವೆ. ಆದರೆ ಬಹಳಷ್ಟು ರೈತರಿಗೆ ಹಣ ಬಂದಿಲ್ಲ. ಕಳೆದ ವರ್ಷ ಅತಿವೃಷ್ಟಿಯಾಗಿ ಬೆಳೆ ಎಲ್ಲಾ ಕೊಳೆತು ಹೋಗಿದೆ. ಫಸಲ್ ಭಿಮಾ ಯೋಜನೆಯ ಹಣವನ್ನಾದರೂ ನೀಡಿದರೆ ನಮ್ಮ ಮುಂದಿನ ಕೃಷಿ ಚಟುವಟಿಕೆ ಹಾಗೂ ಬದುಕು ನಡೆಸಲು ಅನಕೂಲವಾಗುತ್ತದೆ ಎನ್ನುತ್ತಾರೆ ರೈತ ನೀಲಪ್ಪ ಬಾಲೆಹೊಸೂರು.

> ಕಳೆದ ಅನೇಕ ವರ್ಷಗಳಿಂದ ಇನ್ನೂ ವಿಮೆ ದೊರೆತಿಲ್ಲ. ವಿಮೆ ಕಂಪನಿಯ ಖಾಸಗಿ ಏಜೆಂಟ್ ಮೂಲಕ ವಿಮೆ ಮಾಡಿಸುವ ರೈತರಿಗೆ ಹಣ ದೊರೆಯುತ್ತಿದೆ. ಇಂತಹ ಪ್ರಕರಣಗಳು ಬಹಳಷ್ಟು ನಡೆಯುತ್ತಿದ್ದು, ರೈತರು ಬ್ಯಾಂಕ್‌ಗಳ ಮೂಲಕ ವಿಮೆ ತುಂಬಿದರೆ ಅವರಿಗೆ ಯಾವುದೇ ಹಣ ದೊರೆಯುತ್ತಿಲ್ಲ. ಇಂತಹ ಏಜೆಂಟರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕಿದೆ.
>
> **- ಪದ್ಮರಾಜ ಪಾಟೀಲ್.**
>
> ರೈತ ಮುಖಂಡರು, ಗೋವನಾಳ ಗ್ರಾ.ಪಂ ಸದಸ್ಯರು.

> ಕಳೆದ ಅನೇಕ ವರ್ಷಗಳಿಂದ ಬ್ಯಾಂಕ್ ಮೂಲಕ ನೇರವಾಗಿ ಬೆಳೆ ವಿಮೆ ತುಂಬಿದರೂ ಹಣ ಜಮೆ ಆಗಿರಲಿಲ್ಲ. ಹಿಂದಿನ ವರ್ಷ ಏಜೆಂಟ್‌ಗಳು ಹೇಳಿದಂತೆ ಹಿಂಗಾರು ಶೇಂಗಾ ಬೆಳೆ ಜಿಪಿಎಸ್ ಮಾಡಿಸಿದ್ದೆ. ಈ ವರ್ಷ 1.30 ಲಕ್ಷ ರೂ ಹಣ ಬಂದಿದೆ. ಅದರಲ್ಲಿ ಅರ್ಧ ಹಣ ಏಜೆಂಟ್‌ಗಳಿಗೆ ನೀಡಿದ್ದೇನೆ ಎನ್ನುತ್ತಾರೆ ಬೆಳೆ ವಿಮೆ ಪಡೆದ ರೈತ ವೆಂಕಟೇಶ.
>
> ಈ ಬಗ್ಗೆ ಕೃಷಿ ಉಪನಿರ್ದೇಶಕ ಕರಿಯಲ್ಲಪ್ಪ ಪ್ರತಿಕ್ರಿಯಿಸಿ, ಬೆಳೆ ವಿಮೆ ತುಂಬುವ ಖಾಸಗಿ ಏಜೆಂಟ್‌ಗಳ ಬಗ್ಗೆ ಮಾಹಿತಿ ಪಡೆದು, ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

### ಭೀಕರ ರಸ್ತೆ ಅಪಘಾತ । ಬಾಲಕ ಸೇರಿ ಆರು ಜನರ ದಾರುಣ ಸಾವು

# ವಿಧಿಯ ನೆನೆದು ಕಣ್ಣೀರಾದ ದಿಂಗಾಲೇಶ್ವರ ಶ್ರೀಗಳು



**■ ವಿಜಯಸಾಕ್ಷಿ ಸುದ್ದಿ, ಗದಗ**

ಅವರೆಲ್ಲರೂ ಶ್ರೀ ದಿಂಗಾಲೇಶ್ವರ ಸ್ವಾಮೀಜಿಗಳ ಭಕ್ತರು. ದೂರದ ಕಲಬುರಗಿ ಜಿಲ್ಲೆಯಿಂದ ಗದುಗಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿಗಳ ದರ್ಶನಕ್ಕೆಂದು ಆಗಮಿಸುತ್ತಿದ್ದರು. ಆದರೆ, ಸ್ವಾಮೀಜಿಯ ದರ್ಶನ ಪಡೆಯುವ ಮುನ್ನವೇ ಇಹಲೋಕ ತ್ಯಜಿಸಿದ್ದಾರೆ. ಬಸ್ ರೂಪದಲ್ಲಿ ಎದುರು ಬಂದ ಜವರಾಯ, ಪುಟ್ಟ ಮಗುವೂ ಸೇರಿದಂತೆ ಆರು ಜನರ ಪ್ರಾಣಪಕ್ಷಿಯನ್ನು ಕಬಳಿಸಿದ್ದಾನೆ. ತಮ್ಮ ಭಕ್ತರ ದಾರುಣ ಸಾವಿನ ಸುದ್ದಿ ತಿಳಿದ ಸ್ವಾಮೀಜಿಗಳೂ ಕಣ್ಣೀರಾಗಿದ್ದಾರೆ.

ಸಾರಿಗೆ ಸಂಸ್ಥೆಯ ಬಸ್ ಹಾಗೂ ಟಾಟಾ ಸುಮೋ ನಡುವೆ ಸೋಮವಾರ ನರೇಗಲ್ ಪಟ್ಟಣದ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಐವರು ಸ್ಥಳದಲ್ಲಿಯೇ ಸಾವನ್ನಪ್ಪಿದರೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಐದು ವರ್ಷದ ಬಾಲಕ ಇಹಲೋಕ ತ್ಯಜಿಸಿದ್ದಾನೆ. ಗದಗ ನಗರದಿಂದ ಗಜೇಂದ್ರಗಡ ಪಟ್ಟಣಕ್ಕೆ ಹೋಗುತ್ತಿದ್ದ ಸಾರಿಗೆ ಸಂಸ್ಥೆಯ ಬಸ್ ಹಾಗೂ ಕಲಬುರಗಿ ಜಿಲ್ಲೆಯಿಂದ ಶಿರಹಟ್ಟಿ ಪಟ್ಟಣಕ್ಕೆ ಬರುತ್ತಿದ್ದ ಟಾಟಾ ಸುಮೋ ನಡುವೆ ಭೀಕರ ಅಪಘಾತ ಸಂಭವಿಸಿ, ಕಲಬುರಗಿ ಮೂಲದ ಸಚಿನ್ ಕತ್ತಿ(31), ಶಿವಕುಮಾರ್ ಕಲಶೆಟ್ಟಿ(51), ಚಂದ್ರಲಕಾ ಕಲಶೆಟ್ಟಿ (42), ರಾಣಿ ಕಲಶೆಟ್ಟಿ (32), ದ್ರಾಕ್ಷಾಯಿಣಿ ಕತ್ತಿ(33) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಕುಟುಂಬದವರು ಕಳೆದ 25 ವರ್ಷಗಳಿಂದಲೂ ದಿಂಗಾಲೇಶ್ವರ ಮಠದೊಂದಿಗೆ ಸಂಪರ್ಕವನ್ನು ಹೊಂದಿದ್ದರು. ತಮ್ಮ ಮಗುವಿಗೂ ಕೂಡಾ ದಿಂಗಾಲೇಶ್ವರ ಎಂದೇ ಹೆಸರಿಟ್ಟಿದ್ದರು. ಸೋಮವಾರ ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿಯವರನ್ನು ಭೇಟಿ ಮಾಡಲು ಬರುತ್ತಿದ್ದ ಸಂದರ್ಭದಲ್ಲಿ ಈ ರಸ್ತೆ ಅಪಘಾತ ಸಂಭವಿಸಿದೆ.

> ದಿಂಗಾಲೇಶ್ವರ ಸ್ವಾಮೀಜಿ ಶ್ರೀ ಮಠದಿಂದ ಗದಗ ಜಿಮ್ಸ್ ಆಸ್ಪತ್ರೆಗೆ ತೆರಳಿ, ಆಸ್ಪತ್ರೆಯಲ್ಲಿ ದಾಖಲಾದ ಮಕ್ಕಳಾದ ಮಹೇಶ, ಅಲ್ಲಮಪ್ರಭು, ದಿಂಗಾಲೇಶ್ವರ, ಅನುಶ್ರೀ ಅವರ ಆರೋಗ್ಯವನ್ನು ವಿಚಾರಿಸಿದರು. ಗಂಭೀರವಾಗಿ ಗಾಯಗೊಂಡ, 5 ವರ್ಷದ ಬಾಲಕ ದಿಂಗಾಲೇಶ್ವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ವಿಧಿಯಾಟವನ್ನು ನೆನೆದ ದಿಂಗಾಲೇಶ್ವರ ಶ್ರೀಗಳು ಮರುಗಿ ಕಣ್ಣೀರಿಟ್ಟರು.

## ದಸರಾ ವಸ್ತುಪ್ರದರ್ಶನಕ್ಕೆ ಸಚಿವ ಎಚ್ ಕೆ ಪಾಟೀಲ ಚಾಲನೆ



**■ ವಿಜಯಸಾಕ್ಷಿ ಸುದ್ದಿ, ಮೈಸೂರು**

ಐತಿಹಾಸಿಕ ಮೈಸೂರು ದಸರಾ ಅಂಗವಾಗಿ ಮೈಸೂರಿನ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಲಾದ ವಸ್ತು ಪ್ರದರ್ಶನ ಮಳಿಗೆಗಳಿಗೆ ಪ್ರವಾಸೋದ್ಯಮ ಸಚಿವ ಎಚ್ ಕೆ ಪಾಟೀಲ್ ರವಿವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಸೇರಿದಂತೆ ಇತರ ಜನಪ್ರತಿನಿಧಿಗಳು ಮತ್ತು ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

## ಪಶು ಚಿಕಿತ್ಸಾ ವಾಹನ ರೈತರಿಗೆ ಸಹಕಾರಿ



**■ ವಿಜಯಸಾಕ್ಷಿ ಸುದ್ದಿ, ರೋಣ**

ರಾಜ್ಯ ಸರಕಾರ ರೈತರ ನೆರವಿಗಾಗಿ ಪಶು ಚಿಕಿತ್ಸಾ ವಾಹನವನ್ನು ಇಲಾಖೆಗೆ ನೀಡಿದ್ದು, ಪಶು ಚಿಕಿತ್ಸಾ ವಾಹನದಿಂದ ರೈತರಿಗೆ ಸಹಕಾರಿಯಾಗಲಿದೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಅವರು ಸೋಮವಾರ ಪಟ್ಟಣದ ಪೋತರಾಜನ ಕಟ್ಟೆಯ ಬಳಿ ಸಂಚಾರಿ ತುರ್ತು ಪಶು ಚಿಕಿತ್ಸಾ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಾನಾವಾರುಗಳಿಗೆ ಗಂಭೀರ ಗಾಯಗಳಾದಂತಹ ಸಂದರ್ಭದಲ್ಲಿ ಅಥವಾ ಜಾನುವಾರುಗಳು ಅಪಾಯದಲ್ಲಿ ಸಿಲುಕಿರುವ ಸಮಯದಲ್ಲಿ ರೈತರು ಅಥವಾ ಸಾರ್ವಜನಿಕರು 1962 ಸಂಖ್ಯೆಗೆ ಕರೆ ಮಾಡಿದಾಗ ತುರ್ತು ಪಶು ಚಿಕಿತ್ಸಾ ವಾಹನವು ಸ್ಥಳಕ್ಕೆ ಬಂದು ಜಾನುವಾರುಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ನೀಡುತ್ತದೆ. ನುರಿತ ವೈದ್ಯರ ತಂಡ ಸಹ ವಾಹನದಲ್ಲಿ ಲಭ್ಯ ಇರಲಿದೆ ಎಂದರು.

108ರ ಮಾದರಿಯಲ್ಲಿ ತುರ್ತು ಪಶು ಚಿಕಿತ್ಸಾ ವಾಹನ ತನ್ನ ಕರ್ತವ್ಯವನ್ನು ನಿರ್ವಹಿಸಲಿದ್ದು, ರೈತರು ಅವಶ್ಯಕತೆಯಿದ್ದಾಗ ಮಾತ್ರ ವಾಹನಕ್ಕೆ ಕರೆ ಮಾಡಬಹುದು. ಅಲ್ಲದೆ ಪಶು ಆಸ್ಪತ್ರೆಗಳಿರುವ ಸ್ಥಳ ಅಥವಾ ಗ್ರಾಮಗಳಿಗೆ ಈ ವಾಹನ ಬರುವುದಿಲ್ಲ. ಬದಲಾಗಿ ಪಶು ಆಸ್ಪತ್ರೆಯಿಲ್ಲದ ಗ್ರಾಮಗಳಿಗೆ ಮಾತ್ರ ಸಂಚಾರ ನಡೆಸಿ ತನ್ನ ಸೇವೆಯನ್ನು ಒದಗಿಸಲಿದೆ ಎಂದರು.

ಪರಶುರಾಮ ಅಳಗವಾಡಿ, ವ್ಹಿ.ಬಿ ಸೋಮನಕಟ್ಟಿಮಠ, ಯೂಸುಫ್ ಇಟಗಿ, ಗದಿಗೆಪ್ಪ ಕಿರೇಸೂರ, ಇಒ ಡಿ.ಮೋಹನ್, ಡಾ. ಬಿ.ಎಸ್ ಕುರಹಟ್ಟಿ ಸೇರಿದಂತೆ ರೈತರು, ಪಶು ಇಲಾಖೆಯ ವೈದ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಪತ್ರಿಕಾಗೋಷ್ಠಿಯಲ್ಲಿ ಶಾಸಕ ಸಿ.ಸಿ. ಪಾಟೀಲರ ಹೇಳಿಕೆಗೆ ಪ್ರತಿಕ್ರಿಯಿಸಿದ ಬಿ.ಆರ್ ಯಾವಗಲ್

# ಸುಳ್ಳು ಆರೋಪ ಹೊರಿಸುವುದು ಸರಿಯಲ್ಲ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗುತ್ತಿಗೆದಾರರನ್ನು ನಾನಾಗಿಯೇ ನನ್ನ ಮನೆಗೆ ಕರೆದಿಲ್ಲ. ಅವರಾಗಿಯೇ ಬಂದಿದ್ದಾರೆ. ನಾನು ಬೇಡ ಎಂದರೂ ಮನೆಗೆ ಬಂದು, ಬಿಲ್ ಮೊತ್ತವನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಿ ಎಂದು ಲಿಖಿತ ಮನವಿ ಕೊಟ್ಟಿರುವ ಕಾರಣ, ತನಿಖೆಗಾಗಿ ಒತ್ತಾಯಿಸಿದ್ದೇನೆ ಎಂದು ಮಾಜಿ ಶಾಸಕ ಬಿ.ಆರ್ ಯಾವಗಲ್ ಹೇಳಿದರು.

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಯಾವಗಲ್, ಶಾಸಕ ಸಿ.ಸಿ ಪಾಟೀಲ ಅವರ ಆರೋಪಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ನನ್ನ ಬಳಿ ಗುತ್ತಿಗೆದಾರರನ್ನು ಕಳುಹಿಸಿದ್ದೇ ಶಾಸಕ ಸಿ.ಸಿ ಪಾಟೀಲರು.

ಗುತ್ತಿಗೆದಾರರನ್ನು ಸತ್ಕರಿಸಿ, ಗುತ್ತಿಗೆದಾರರು ರಾಜಕಾರಣಕ್ಕಿಳಿಯಬಾರದು ಎಂದು ಸಲಹೆಯನ್ನೂ ನೀಡಿದ್ದೇನೆ. ಈ ಕಾರಣವನ್ನಿಟ್ಟುಕೊಂಡು ಗುತ್ತಿಗೆದಾರರ ಜೊತೆ ಸಭೆ ಮಾಡಿದ್ದಾರೆ ಎಂದು ಆರೋಪಿಸುವುದು ಸರಿಯಲ್ಲ ಎಂದರು.

ನರಗುಂದ ಕ್ಷೇತ್ರದಲ್ಲಿ ನಡೆದ 600 ಕೋಟಿ ರೂ. ಮೊತ್ತದ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ. ಕಾಮಗಾರಿ ಕಳಪೆಯಾಗಿದೆ, ನಿಯಮಗಳ ಪಾಲನೆಯಾಗಿಲ್ಲ. ಅದೆಲ್ಲವನ್ನು ನೋಡಬೇಕಾಗಿದ್ದು ಸಚಿವರ ಜವಾಬ್ದಾರಿ ಎನ್ನುವುದನ್ನು ಹೇಳಿದ್ದೇನೆಯೇ ಹೊರತು, ಎಲ್ಲಿಯೂ ಸಿ.ಸಿ ಪಾಟೀಲ ಅವರ ಬಗ್ಗೆ ವೈಯಕ್ತಿಕವಾಗಿ ಆರೋಪ, ಟೀಕೆ ಮಾಡಿಲ್ಲ. ಆದರೆ ಸಿ.ಸಿ ಪಾಟೀಲರು ನನ್ನ ವಿರುದ್ಧ ವೈಯಕ್ತಿಕವಾಗಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿದರು.

ಸುದೀರ್ಘ ರಾಜಕೀಯ ಜೀವನದಲ್ಲಿ 11 ಬಾರಿ ವಿಧಾನಸಭೆಗೆ ಸ್ಪರ್ಧಿಸಿದ್ದೇನೆ.

ಐದು ಬಾರಿ ಶಾಸಕನಾಗಿಯೂ ಆಯ್ಕೆಯಾಗಿದ್ದೇನೆ. ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಿದ್ದೇನೆ. ಆದರೆ ಸಿ.ಸಿ ಪಾಟೀಲ ಅವರು ತಮಗೆ ತಾವೇ ಗುಂಡು ಹಾರಿಸಿಕೊಂಡು, ಸಾವು-ಬದುಕಿನ ಮಧ್ಯೆ ಹೋರಾಟ ಮಾಡುತ್ತಾ ಚುನಾವಣೆಗೆ ಸ್ಪರ್ಧಿಸಿದ್ದು ಅಧಿಕಾರದ ಆಸೆಯಿಂದ ಎನ್ನುವುದನ್ನು ಜನ ಮರೆತಿಲ್ಲ ಎಂದರು.



ನರಗುಂದ ಕ್ಷೇತ್ರದ ಅಭಿವೃದ್ಧಿಗಾಗಿ 1800 ಕೋಟಿ ರೂ. ತಂದಿದ್ದೇನೆ ಎಂದು ಸಿ.ಸಿ. ಪಾಟೀಲ ಹೇಳುತ್ತಾರೆ. ಅವರಿಗೆ ಧೈರ್ಯವಿದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಪ್ರಾಮಾಣಿಕವಾಗಿ ಪ್ರಚಾರಕ್ಕೂ ಹೋಗದೆ ಮನೆಯಲ್ಲೇ ಇದ್ದು ಚುನಾವಣೆ ಎದುರಿಸಲಿ ಎಂದು ಸವಾಲು ಹಾಕಿದರು.

ಅವರಿಗೆ ನಿಜವಾಗಿಯೂ ಧೈರ್ಯವಿದ್ದರೆ ನವಲಗುಂದಲ್ಲಿ ನನ್ನ ವಿರುದ್ಧ ದಾಖಲಾಗಿದೆ ಎನ್ನುತ್ತಿರುವ ಪ್ರಕರಣ ಏನು ಎನ್ನುವುದನ್ನು ಬಹಿರಂಗಪಡಿಸಲಿ.

ಕೇವಲ ಒಂದು ಅಂಗಡಿ ಮತ್ತು ಬೈಕ್ ಇಟ್ಟುಕೊಂಡು ರಾಜಕಾರಣಕ್ಕೆ ಬಂದವರು ಇಂದು ಅರಮನೆಯಂಥ ಬಂಗಲೆ ಹೊಂದಿದ್ದಾರೆ. ಅವರೇನು ಜಮೀನಿನಲ್ಲಿ ಬಂಗಾರ ಬೆಳೆಯುತ್ತಾರಾ ಎಂದು ಲೇವಡಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಎಮ್.ಎಸ್. ಪಾಟೀಲ, ಪ್ರವೀಣ್ ಯಾವಗಲ್, ರಾಜು ಕಲಾಲ್, ಪ್ರವೀಣ್ ಸಂಗಳದಶೆಟ್ಟರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

> ನನ್ನ ಪುತ್ರ ವಿವೇಕ ಯಾವಗಲ್ ಹೈಕೋರ್ಟ್ ವಕೀಲನಾಗಿ ನೇಮಕಾತಿ ಮೂಲಕ ಆಯ್ಕೆಯಾಗಿದ್ದಾನೆ. ಶಿಫಾರಸು ಬಳಸಿ ಪಡೆದುಕೊಳ್ಳಬಹುದಾದ ಹುದ್ದೆ ಅದಲ್ಲ ಎನ್ನುವುದನ್ನು ಸಿ.ಸಿ ಪಾಟೀಲರು ಅರ್ಥ ಮಾಡಿಕೊಳ್ಳಬೇಕು. ಅಲ್ಲದೆ, ಅವರು ಆರೋಪ ಮಾಡುವ ಮುನ್ನವೇ ವಿವೇಕ ಯಾವಗಲ್ ರಾಜೀನಾಮೆ ನೀಡಿದ್ದಾರೆ. ಈ ಬಗ್ಗೆ ಆರೋಪಿಸುವ ಸಿ.ಸಿ ಪಾಟೀಲರು ತಮ್ಮ ಪುತ್ರ ಉಮೇಶಗೌಡರನ್ನು ಬೇರೆ ಬೇರೆ ಸಂಸ್ಥೆಗಳಿಗೆ ನಿಯೋಜಿಸಿರುವುದನ್ನು ಮರೆಯಬಾರದು ಎಂದು ಯಾವಗಲ್ ತಿರುಗೇಟು ನೀಡಿದರು.

## ಸಾಕ್ಷಿ ಸುಭಾಷಿತ

ದಾನವೇ ಜಗತ್ತಿನ ಅತ್ಯುತ್ತಮ ಆಭರಣ

–ಸುಭಾಷಿತ

## ಸಂಪಾದಕೀಯ

# ಒಡೆದ ಮನೆ ಆಗಲಿದೆ ಜೆಡಿಎಸ್

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಎನ್.ಡಿ.ಎ ಮೈತ್ರಿಕೂಟ ಸೇರುವ ಜೆಡಿಎಸ್ ನಿರ್ಧಾರದಿಂದ ಜಾತ್ಯಾತೀತ ಜನತಾದಳ ಪಕ್ಷದಲ್ಲಿ ಆಗಲೇ ಬಿರುಕು ಮೂಡಿತ್ತು. ಈ ಮಧ್ಯೆ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಎನ್‌ಡಿಎ ಮೈತ್ರಿಕೂಟ ಸೇರುವುದಿಲ್ಲ ಎನ್ನುವ ಮೂಲಕ ಪಕ್ಷದಲ್ಲಿ ಒಡಕು ಮೂಡಿಸುವ ಸುಳಿವು ನೀಡಿದ್ದಾರೆ.

ಸಿ.ಎಂ. ಇಬ್ರಾಹಿಂ ಹೇಳಿಕೆಯನ್ನು ಅಷ್ಟು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಸದ್ಯಕ್ಕೆ ಅವರು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಪಕ್ಷದ ಅಧಿಕೃತ ಅಧ್ಯಕ್ಷರೇ ಮೈತ್ರಿಯ ಅಥವಾ ಎನ್ ಡಿ ಎ ಮೈತ್ರಿ ಕೂಟ ಸೇರುವ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿದೆ.

ಆದರೆ ಕುಮಾರಸ್ವಾಮಿ ಅವರು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷಿಯವಾಗಿ ಬಿಜೆಪಿ ಜೊತೆ ಸಖ್ಯ ಬೆಳೆಸಿರುವುದು ಅನೇಕ ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ. ಕುಮಾರಸ್ವಾಮಿ ಮೈತ್ರಿ ಸುಳಿವು ನೀಡುತ್ತಿದ್ದಂತೆ ಜೆಡಿಎಸ್‌ನ ಮುಸ್ಲಿಂ ನಾಯಕರು ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದಾರೆ. ಅಲ್ಪಸಂಖ್ಯಾತ ಸಮುದಾಯದ ನಾಯಕರ ನಡೆಯಿಂದ ಆಕ್ರೋಶಗೊಂಡ ಕುಮಾರಸ್ವಾಮಿ ಅವರು, ಮುಸ್ಲಿಂ ಮತದಾರರನ್ನು ನಂಬಿ ರಾಜಕಾರಣ ಮಾಡುತ್ತಿಲ್ಲ ಎನ್ನುವ ವಿವಾದಾತ್ಮಕ ಹೇಳಿಕೆಯನ್ನ ನೀಡಿರುವುದು ಸಹ ಪಕ್ಷದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಮುಸ್ಲಿಂ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಆಗಬೇಕು, ಜಿಲ್ಲೆಗೊಬ್ಬರು ಮುಸ್ಲಿಂ ಶಾಸಕರಿರಬೇಕು ಎಂದೆಲ್ಲಾ ಹೇಳಿ, ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೂ ಮುಸ್ಲಿಂ ವ್ಯಕ್ತಿಯೊಬ್ಬನನ್ನು ತಂದು ಕೂಡಿಸಿದ ಕುಮಾರಸ್ವಾಮಿ ಅವರೇ ಇಂಥ ಹೇಳಿಕೆ ನೀಡಿರುವುದು ಪಕ್ಷದ ಅಲ್ಪಸಂಖ್ಯಾತ ಸಮುದಾಯದ ನಾಯಕರು ಮುನಿಸಿಕೊಳ್ಳಲು ಕಾರಣವಾಯಿತು. ಸದ್ಯ ಸಿಎಂ ಇಬ್ರಾಹಿಂ ಅವರು ಪಕ್ಷದ ರಾಜ್ಯಾಧ್ಯಕ್ಷರಾಗಿ ಅಧಿಕೃತವಾಗಿಯೇ ಎನ್‌ಡಿಎ ಜೊತೆ ಸೇರುವುದಿಲ್ಲ ಎನ್ನುವ ಮೂಲಕ ಜೆಡಿಎಸ್‌ನಲ್ಲಿ ಹೊಸ ಸಂಚಲನ ಸೃಷ್ಟಿಸಿದ್ದಾರೆ. ಶೀಘ್ರವೇ ಪಕ್ಷದ ಕೋರ್ ಕಮಿಟಿ ಸಭೆ ಕರೆದು, ಜೆಡಿಎಸ್ ಶಾಸಕರ ಒಮ್ಮತದ ಅಭಿಪ್ರಾಯವನ್ನು ಪಕ್ಷದ ವರಿಷ್ಠ ದೇವೇಗೌಡರ ಮುಂದಿಟ್ಟು, ಯಾವುದೇ ಕಾರಣಕ್ಕೂ ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ನೀಡದಿರಲು ಒತ್ತಾಯಿಸುವ ಕಾರ್ಯಕ್ಕೆ ಇಬ್ರಾಹಿಂ ಮುಂದಾಗಿದ್ದಾರೆ.

ಇಬ್ರಾಹಿಂ ಅವರ ಈ ನಿರ್ಧಾರಕ್ಕೆ ಎಷ್ಟು ಜನ ಶಾಸಕರು ಬೆಂಬಲ ನೀಡುತ್ತಾರೆ ಎನ್ನುವದೇ ಯಕ್ಷಪ್ರಶ್ನೆಯಾಗಿದೆ. ಒಂದೊಮ್ಮೆ ಇಬ್ರಾಹಿಂ ಅವರಿಗೆ ಬೆಂಬಲ ವ್ಯಕ್ತವಾದರೆ, ಮಹಾರಾಷ್ಟ್ರದಲ್ಲಿ ಶಿವಸೇನೆಗೆ ಆದ ಗತಿಯೇ ಕರ್ನಾಟಕದಲ್ಲಿ ಜೆಡಿಎಸ್ ಆಗಲಿದೆ.

## ಕವನ

# ನವರಾತಿ



ನಾಡಹಬ್ಬ ನವರಾತ್ರಿ ಸಡಗರದಿ ನಡೆದಿರಲು
ಮೈಸೂರ ಒಂದು ಸುತ್ತು ಸುತ್ತಿ ಬರೋಣ...

ಸಿಂಗಾರದ ಆನೆಮೇಲೆ ಚಾಮುಂಡಿ ಹೊಂಟೌಳೆ
ಸಿಂಗರದ ಅಂಬಾರಿ ನೋಡಿ ಬರೋಣ
ಚಿತ್ತಾರ ಬರೆಸಿಕೊಂಡು ಗಜರಾಜ ಹೊಂಟೌನೆ
ಚಿತ್ತವಿಟ್ಟು ಜಂಬೂಸವಾರಿ ನೋಡಿ ಬರೋಣ...

ರಾಜಮಹಾರಾಜರು ಆಳಿದಂತ ನಾಡಿನಲಿ
ಮಜಕೊಡೋ ಮೈಸೂರ ತಿಳಿದುಬರೋಣ
ರಾಜವೈಭವವ ಮತ್ತಷ್ಟು ತಿಳಿದುಕೊಂಡು
ಅರಮನೆಯ ಒಂದು ಸುತ್ತು ಸುತ್ತಿ ಬರೋಣ...

ಬಗೆಬಗೆಯ ಕುಣಿತಗಳ ಕುಣಿದು ಹೊಂಟೌರೆ
ನಾವು ನಾಕು ಕುಣಿತಗಳ ಹಾಕಿಬರೋಣ
ಜಾನಪದ ಲೋಕವನೆ ನಮಗಾಗಿ ಇಳಿಸೌರೆ
ಮನಸಿಟ್ಟು ಎಲ್ಲವನು ಸವಿದು ಬರೋಣ...

ಝುಗಮಗಿಸೊ ದೀಪಗಳ ಸೌಂದರ್ಯ ನೋಡಿಕೊಂಡು
ಹಲ್ಕಿರಿದು ಪೋಟೋದಲಿ ಮುಳುಗಿಬಿಡೋಣ
ಬನ್ನಿ ಪತ್ರೆ ಹಂಚುತ್ತಾ ಶುಭನುಡಿಯ ಆಡುತ್ತಾ
ವಿಜಯದಶಮಿ ಆಚರಣೆ ಮಾಡಿಬಿಡೋಣ...

– ಸಿ.ಎನ್ ಭಾಗ್ಯಲಕ್ಷ್ಮೀನಾರಾಯಣ, ಮೈಸೂರು.

### 67ನೇ ಧರ್ಮಚಕ್ರ ಪ್ರವರ್ತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾವಳ್ಳಿ ಶಂಕರ ಅಭಿಮತ

# ಸಂವಿಧಾನದಿಂದಲೇ ನಮ್ಮೆಲ್ಲರ ರಕ್ಷಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬ್ರಾಹ್ಮಣರು ಜನಸಂಖ್ಯೆ ಮೀರಿ ಹೇಗೆ ಅಧಿಕಾರ ಹಿಡಿಯುತ್ತಿದ್ದಾರೆ ಎಂಬ ಕುರಿತು ಜನಗಣತಿ ಮೂಲಕ ರಾಜ್ಯದ ಜನತೆಗೆ ಸ್ಪಷ್ಟತೆ ಸಿಗುತ್ತದೆ. ಇದರಿಂದ ದಲಿತರಿಗೆ, ಹಿಂದುಳಿದ ಸಮುದಾಯಗಳಿಗೆ ಸಾಕಷ್ಟು ಅನ್ಯಾಯವಾಗಿದೆ. ಹಾಗಾಗಿ ದಲಿತ ಚಳುವಳಿ ಮತ್ತೆ ಕಟ್ಟಬೇಕಿದೆ. ಅಂದು ಹೋರಾಡಿದ ಮಹನೀಯರ ಹೋರಾಟ ವ್ಯರ್ಥ ಮಾಡದೆ ಎಲ್ಲರೂ ಚಳುವಳಿಯಲ್ಲಿ ತೊಡಗಿಸಿಕೊಳ್ಳಿ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರವಾದ) ರಾಜ್ಯ ಸಮಿತಿಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ ಅವರು ಕರೆ ನೀಡಿದರು.

ಗದಗ ಶಹರದ ಬಸವೇಶ್ವರ ಸಭಾಭವನದಲ್ಲಿ ಹಮ್ಮಿಕೊಂಡಿದ್ದ 67ನೇ ಧರ್ಮಚಕ್ರ ಪ್ರವರ್ತನ ದಿನಾಚರಣೆ ಮತ್ತು ಬೆಳಗಾವಿ ವಿಭಾಗ ಮಟ್ಟದ ದಸಂಸ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.



ಒಂದು ಕಾಲದಲ್ಲಿ ದಲಿತರ ಮೇಲೆ ಅನ್ಯಾಯ, ಅಸ್ಪ್ರಶ್ಯತೆ ಸಹಜವಾಗಿತ್ತು. ಅನ್ಯಾಯಗಳ ವಿರುದ್ಧ ಧೈರ್ಯ ತುಂಬಿದ ಸಾಕಷ್ಟು ಮಹನೀಯರಿಂದ ಜನರು ದಲಿತ ಚಳುವಳಿಗಳಲ್ಲಿ ತೊಡಗಿಸಿಕೊಂಡರು. ದಲಿತ ಚಳುವಳಿಗಾಗಿ ರಕ್ತವನ್ನು ಹರಿಸಿದರು. ದಲಿತ ಸಮುದಾಯದ ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಲು ಅನೇಕ ಚಳುವಳಿಗಳನ್ನು ರೂಪಿಸಿಕೊಂಡು ರಾಜಕೀಯ ಪ್ರಜ್ಞೆ ಬೆಳೆಸಲು ಇಂಡಿಪೆಂಡೆಟ್ ಲೇಬರ್ ಪಾರ್ಟಿಯನ್ನು ಅಂಬೇಡ್ಕರವರು ಸ್ಥಾಪಿಸಿದರು ಎಂದರು.

ಮುಖ್ಯ ಅತಿಥಿಗಳಾಗಿ ದ.ಸಂ.ಸ. ರಾಜ್ಯ ಉಪ ಪ್ರಧಾನ ಸಂಚಾಲಕರಾದ ನಾಗಣ್ಣ ಬಡಿಗೇರ ಅವರು ಆಗಮಿಸಿದ್ದರು. ಕಾರ್ಯಕ್ರಮ ಪ್ರಾರಂಭದಲ್ಲಿ ಸಂವಿಧಾನ ಪೂರ್ವಪೀಠಿಕೆ ಬೋಧಿಸಲಾಯಿತು. ವೇದಿಕೆಯ ಮೇಲೆ ಬಸವರಾಜ ಕಡೇಮನಿ, ದ.ಸಂ.ಸ. ಮುಖಂಡ ಸಿದ್ದಪ್ಪ ಕಾಂಬಳೆ, ಪ್ರಕಾಶ ಕಾಳೆ, ಬೆಳಗಾವಿ ವಿಭಾಗೀಯ ದ.ಸಂ.ಸ ಸಂಚಾಲಕ ಲಕ್ಷ್ಮಣ ದೊಡ್ಡಮನಿ, ವಾಸು ಕಲಕಂಬಿ, ಬೆಳಗಾವಿ ಜಿಲ್ಲಾ ದ.ಸಂ.ಸ ಪ್ರಧಾನ ಸಂಚಾಲಕ ಯುವರಾಜ ಬಂಡಿ, ವಿಜಯಪುರ ಸಂಚಾಲಕ ಸಂಜು ಕಂಭಾಗಿ, ಶಕುಂತಲಾ, ಎಚ್.ಡಿ ಪೂಜಾರ, ದಲಿತ ಕಲಾಮಂಡಳಿಯ ಅಧ್ಯಕ್ಷ ಶರೀಫ ಬಿಳೆಯಲಿ, ಆನಂದ ಸಿಂಗಾಡಿ, ನಾಗರಾಜ ಗೋಕಾವಿ, ಪೂಜಾ ಬೇವೂರ, ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮುತ್ತು ಬಿಳೆಯಲಿ, ಶಿವಾನಂದ ತಮ್ಮಣ್ಣವರ, ಪರಶು ಕಾಳೆ, ಅನಿಲ ಕಾಳೆ, ಮರಿಯಪ್ಪ ನಡಗೇರಿ, ಪ್ರಕಾಶ ಕಲೆಕ್ಕನವರು, ಪ್ರಕಾಶ ಕಮಡೊಳ್ಳಿ, ಬಸವರಾಜ ಬಿಳೆಯಲಿ, ಮಹಾಂತೇಶ ನಡಗೇರಿ, ಕೊಟ್ರೇಶ ಜಕ್ಕಮ್ಮನವರ, ಚಂದ್ರು ಜಕ್ಕಮ್ಮನವರ, ಪ್ರಕಾಶ ಗಡಾದವರು, ಮಾರುತಿ ಅಂಗಡಿ, ಪ್ರಕಾಶ ಭಜಂತ್ರಿ, ಕೆಂಚಪ್ಪ ವ್ಯಾಗೇರಿ, ಮಂಜುನಾಥ ಹಗೇದಾಳ, ಮಂಜುನಾಥ ಚಲವಾದಿ, ಡಿ.ಎಲ್ ಬಣಕಾರ, ಶ್ರೀಧರ ಕಲಾಲ, ಕುಮಾರ ಕಮತರ, ಅರುಣ ಹಿರೇಮಠ, ನಾಗರಾಜ ದೊಡ್ಡಮನಿ, ಯಮನೂರ ಇಳಕಲ್ಲ, ವಿದ್ಯಾರ್ಥಿ ಘಟಕದ ಮುತ್ತು ಒಂಟೆತ್ತಿನ, ಮಂಜುನಾಥ ರಾಜೂರ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರವಾದ) ಗದಗ ಜಿಲ್ಲಾ ಪ್ರಧಾನ ಸಂಚಾಲಕ ಬಾಲರಾಜ ಅರಬರ ನಿರೂಪಿಸಿ ವಂದಿಸಿದರು.

ಸಂವಿಧಾನವನ್ನು ರಕ್ಷಣೆ ಮಾಡಿದರೆ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ. ಹಿಂದೂ ಧರ್ಮದ ಕೊಳಕು ಬಟ್ಟೆಯನ್ನು ಕಳಚಿ ಶಾಂತಿಯ ಬೌದ್ಧ ಬಟ್ಟೆಯನ್ನು ಧರಿಸಬೇಕಿದೆ. ಮೋದಿ, ಶಾ, ಜಾತಿಗಣತಿ ಮಾಡುವುದನ್ನು ವಿರೋಧಿಸುತ್ತಿದ್ದಾರೆ. ಏಕೆಂದರೆ ಆರ್‌ಎಸ್‌ಎಸ್ 2025ಕ್ಕೆ ಹಿಂದೂ ರಾಷ್ಟ್ರ ಮಾಡಲು ಹೊರಟ್ಟಿದ್ದ ಬಲೂನಿಗೆ ಜಾತಿ ಗಣತಿ ಸೂಜಿ ಚುಚ್ಚಿದೆ ಎಂದು ಮಾವಳ್ಳಿ ಶಂಕರ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ್ನು ಟೀಕಿಸಿದರು.

# 'ಮಕ್ಕಳಿಗೆ ಜೀವನ ಕೌಶಲ್ಯ' ತರಬೇತಿಗೆ ಚಾಲನೆ



■ ವಿಜಯಸಾಕ್ಷಿ ಸುದ್ದಿ, ಗದಗ

ಎಂ.ಕೆ ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗದಗ, ಸರ್ಕಾರಿ ಬಾಲಕರ/ಬಾಲಕಿಯರ ಬಾಲ ಮಂದಿರ ಗದಗ ಇವರ ಸಂಯುಕ್ತ ಆಶ್ರಯದಲ್ಲಿ 'ಮಕ್ಕಳಿಗೆ ಜೀವನ ಕೌಶಲ್ಯ' ತರಬೇತಿ ಕಾರ್ಯಕ್ರಮ ಜರುಗಿತು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಜಿ.ಮಣ್ಣೂರ, ಗದಗ ಮಕ್ಕಳ ಕಲ್ಯಾಣ ಸಮಿತಿಯ ಅನ್ನಪೂರ್ಣ ಗಾಣಿಗೇರ್, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧೀಕ್ಷಕ ಮುತ್ತಣ್ಣ ಸಿ.ಎ ಶಿಬಿರಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಬಾಲಕರ ಬಾಲಮಂದಿರದ ಅಧೀಕ್ಷಕರಾದ ನಿರ್ಮಲಾ ಚಿಕ್ಕಣ್ಣವರ, ಸರ್ಕಾರಿ ಬಾಲಕಿಯರ ಬಾಲಮಂದಿರದ ಅಧೀಕ್ಷಕರಾದ ಲಕ್ಷ್ಮೀ ಬಾಗೆವಾಡಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಅನುಪಮಾ ಹಿರೇಗೌಡರ ಪಾಲ್ಗೊಂಡಿದ್ದರು. ಶಿಬಿರದ ಸಂಚಾಲಕರಾಗಿ ಜಾಕಿರ್ ಹುಸೇನ್ ಎಂ.ಕೊರ್ಲಹಳ್ಳಿ ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಪ್ರದೀಪ್ ಕುಮಾರ, ಮಾಲಾ ತಂಬುಳಿ, ಮಾಲನ ಆರ್.ಸುಂಕದ, ಗಣೇಶ್ ಸಿಂಗ್ ದೊಡ್ಡಮನಿ, ಸಂಜೀವ್ ಕುಮಾರ ಬೆಳಿಗೇರಿ ಪಾಲ್ಗೊಂಡರು. ಯಲ್ಲಾಲಿಂಗ ಸಿ.ಕತ್ತಿ ಕಾರ್ಯಕ್ರಮ ನಿರೂಪಿಸಿದರು. ಪ್ರಭಾವತಿ ಎಚ್. ಗೌರಡ್ಡಿ ವಂದಿಸಿದರು.

# ದಸಾಪ ಕಾರ್ಯ ಶ್ಲಾಘನೀಯ

■ ವಿಜಯಸಾಕ್ಷಿ ಸುದ್ದಿ, ಗದಗ

ದಲಿತ ಸಾಹಿತ್ಯ ಪರಿಷತ್ತು 30ನೇ ವರ್ಷದ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದ್ದು, ಸಂಸ್ಥೆಯ ಕಾರ್ಯಕ್ರಮಗಳು ಯಾವಾಗಲೂ ರಚನಾತ್ಮಕವಾಗಿರುತ್ತವೆ. ವಿಶೇಷವಾಗಿ ಉದಯೋನ್ಮುಖ ಲೇಖಕರಿಗೆ ದಸಾಪ ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯ ಎಂದು ಸಂಸ್ಕೃತಿ ಚಿಂತಕರಾದ ಜಿ.ಬಿ ಪಾಟೀಲ ನುಡಿದರು.

ಅವರು ಇತ್ತೀಚೆಗೆ ಇಲ್ಲಿನ ತೋಂಟದಾರ್ಯ ಮಠದ ಡಾ. ಎಂ.ಎಂ ಕಲಬುರ್ಗಿ ಸಂಶೋಧನಾ ಕೇಂದ್ರದಲ್ಲಿ ಜರುಗಿದ ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಹಾಗೂ ರಾಜ್ಯ ಘಟಕದ 30ನೇ ವರ್ಷಾಚರಣೆ, ಪುಸ್ತಕ ಬಿಡುಗಡೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಅಧ್ಯಕ್ಷತೆ ವಹಿಸಿದ್ದ ದಸಾಪ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ ಮಾತನಾಡಿ, ಬುದ್ಧ–ಬಸವ–ಅಂಬೇಡ್ಕರ ಪ್ರಜ್ಞೆಯನ್ನು ಜಾಗೃತಗೊಳಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ದಸಾಪ ಶೋಷಿತರಿಗೆ ಧ್ವನಿ ನೀಡಿದ ವೇದಿಕೆಯಾಗಿದೆ ಎಂದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಎಂ.ಸಿ ಕಟ್ಟಿಮನಿ ಹಾಗೂ ಶಿಲ್ಪಾ ಮ್ಯಾಗೇರಿ ಮಾತನಾಡಿದರು. ಕವಿಗೋಷ್ಠಿಯಲ್ಲಿ ಎಚ್.ಕೆ ಹಲವಾಗಲಿ, ಬಂಗಾರದಗುಂಡ ಗುಡದಪ್ಪ, ಈಶ್ವರ ಕುರಿ, ಮಂಗಳಗೌರಿ ಹಿರೇಮಠ, ಅಶ್ವಿನಿ ಜೋಶಿ, ಶೋಭಾ ಗಾಳಿ, ಶಾರದಾ ಬಾಣದ, ಭಾಗ್ಯಶ್ರೀ ಹುರಕಡ್ಲಿ, ರಮಾ ಬಸು, ಎಂ.ಸಿ ದೊಡ್ಡಮನಿ, ಮಹೇಶ ವಡ್ಡಿನ, ಎಂ.ಡಿ ಮಾದರ, ಚಂದ್ರಪ್ಪ ಬಾರಂಗಿ, ಕೊಟ್ರೇಶ ಜವಳಿ ಕಾವ್ಯ ವಾಚನ ಮಾಡಿದರು. ಸೋಮಶೇಖರ ದೊಡ್ಡಮನಿ ಪ್ರಾರ್ಥಿಸಿದರು. ಎಚ್.ಎಂ ದೊಡ್ಡಮನಿ ಸ್ವಾಗತಿಸಿ ನಿರೂಪಿಸಿದರು.

# ಫೆವಾರ್ಡ್–ಕೆ ಮಾಸಿಕ ಸಭೆ



■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ–ಫೆವಾರ್ಡ್–ಕೆ ಗದಗ ಇವರ ಮಾಸಿಕ ಸಭೆಯು ಇತ್ತೀಚೆಗೆ ಹುಲಕೋಟಿಯ ಕೆವಿಕೆಯಲ್ಲಿ ಜರುಗಿತು.

ಸಭೆಯಲ್ಲಿ ಸದಸ್ಯತ್ವ ನವೀಕರಣ ಮತ್ತು ಹೊಸ ಸಂಸ್ಥೆಗಳ ಸದಸ್ಯತ್ವ, ಸಾಮಾಜಿಕ ಕಾರ್ಯಕರ್ತರ ಭದ್ರತೆಗೆ ನೋಂದಣಿ ಪ್ರಕ್ರಿಯೆಗೆ ಪ್ರೆಸ್ ನೋಟ್ ರಿಲೀಸ್ ಮಾಡುವುದು, ಹಸಿರು ಕರ್ನಾಟಕ ಕಾರ್ಯಕ್ರಮಕ್ಕೆ ಸಂಸ್ಥೆಗಳು ಆಯ್ಕೆ ಮಾಡುವುದು, ವಿಪತ್ತು ನಿರ್ವಹಣೆಯಲ್ಲಿ ಯುನಿಸೆಫ್‌ನೊಂದಿಗೆ ಕಾರ್ಯನಿರ್ವಹಿಸಲು ತಾಲೂಕಿಗೆ ಒಂದು ಸಂಸ್ಥೆಯನ್ನು ಆಯ್ಕೆ ಮಾಡುವುದು, ನಿರಂತರ ಲೈಟ್ ಸಂಸ್ಥೆಗಳ ಬಲವರ್ಧನೆ ಕಾರ್ಯಕ್ರಮಕ್ಕೆ ಸಂಸ್ಥೆಗಳ ಆಯ್ಕೆ ಮಾಡುವುದು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಪೆವಾರ್ಡ್–ಕೆ ಗದಗ ಜಿಲ್ಲಾಧ್ಯಕ್ಷ ಬಸವರಾಜ ನರೇಗಲ್, ಕಾರ್ಯದರ್ಶಿ ರಮೇಶ ಕೋಳೂರ, ಉಪಾಧ್ಯಕ್ಷರಾದ ನಾಗಮ್ಮ ಅಂಬಿಗೇರ, ರಾಜ್ಯ ಸಮಿತಿ ಸದಸ್ಯರಾದ ಜಯಶ್ರೀ ಹಿರೇಮಠ, ಮಲ್ಲಿಕಾರ್ಜುನಗೌಡ ಜಕ್ಕನಗೌಡ್ರ, ಮಂಜುಳಾ ಕಲಕೇರಿ ಹಾಗೂ ಜಿಲ್ಲೆಯ ಎಲ್ಲ ಸಂಸ್ಥೆಗಳ ಸದಸ್ಯರು ಭಾಗವಹಿಸಿದ್ದರು.

# ಸಹಕಾರ, ಸಂಘಟನೆ ಎಲ್ಲವನ್ನೂ ಗೆಲ್ಲುತ್ತದೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಂಘಟನೆಯಲ್ಲಿ ಶಕ್ತಿ ಇದೆ. ಎಲ್ಲರೂ ಸಹಕಾರ ಕೊಟ್ಟರೆ ಸರಕಾರಿ ಕೆಲಸಗಳು ಸುಗಮವಾಗಿ ಆಗುತ್ತವೆ. ಸಂಬಂಧಗಳಲ್ಲಿ ಪ್ರೀತಿ ಇದ್ದರೆ ಎಲ್ಲರನ್ನು ಒಂದಾಗಿಸುತ್ತದೆ. ಸಹಕಾರ ಮತ್ತು ಸಂಘಟನೆಯಿಂದ ಎಲ್ಲವನ್ನು ಗೆಲ್ಲಬಹುದು ಎಂದು ನ್ಯಾಯವಾದಿ ಎಂ.ಎ ಫನಿಬಂದ ಅಭಿಪ್ರಾಯಪಟ್ಟರು.

ಗದಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರಿಕಾರಿ ವಕೀಲರಾಗಿ ನೇಮಕವಾದ ನಿಮಿತ್ತ ಇಲ್ಲಿನ ಕಮತರ ಬಡಾವಣೆಯ ನಿವಾಸಿಗರು ಏರ್ಪಡಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಗ್ರಾಹಕ ನ್ಯಾಯಾಲಯದ ಚೇರಮನ್ ಎ.ಜಿ ಮಾಲದಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗದಗ ಜಿಲ್ಲಾ ಹಡಪದ ಸಮಾಜದ ಅಧ್ಯಕ್ಷ ಮೋಹನ ಚಂದಪ್ಪನವರ ಮಾತನಾಡಿದರು. ಇದೇ ಸಂದರ್ಭದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಎ.ವಿ ಪ್ರಭು ಮತ್ತು ನಿವೃತ್ತ ಶಿಕ್ಷಕ ಆಯ್.ವಿ ಮೆಣಸಗಿ ಇವರನ್ನು ಗೌರವಿಸಲಾಗಿತು.



ವೇದಿಕೆಯಲ್ಲಿ ರವಿ ಆರ್.ಪಾಟೀಲ, ನಾಗರಾಜ ಪೂಜಾರ, ವೆಂಕಟೇಶ ಕಟವಟೆ, ಶಿದ್ದು ಮಡಿವಾಳರ, ಶಿವಯೋಗಿ ತೆಗ್ಗಿನಮಠ, ಅರುಣ ರಾಯಕರ, ರಾಘು ಕಟವಟೆ, ವಿನಾಯಕ್ ಹೆಬಸೂರ, ಎಸ್.ಎಸ್ ಬಿಜಾಪೂರ, ಪ್ರಕಾಶ ಬದಿ, ನಜೀರ ಕಾಟಾಪೂರ, ಕಿಶೋರ ಪೂಜಾರ, ಎನ್.ಜಿ ರೇವಣಕರ, ಎನ್.ಜಿ ಹೊಟ್ಟೆನಹಳ್ಳಿ ಮೊದಲಾದವರು ಹಾಜರಿದ್ದರು. ಶಿದ್ದು ಮಡಿವಾಳರ ಸ್ವಾಗತಿಸಿದರು. ಅಶೋಕ ಪ್ರಭು ನಿರೂಪಿಸಿದರು. ರವಿ ಪಾಟೀಲ ವಂದಿಸಿದರು.

# ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗೆ ನೇರ ಸಂದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ವಿಭಾಗ ಅಂಚೆ ಅಧೀಕ್ಷಕರು ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಪ್ರಸ್ತಾಪಿಸಿದ್ದು, ಅರ್ಹ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಅವರ ಶೈಕ್ಷಣಿಕ ಪ್ರಮಾಣ ಪತ್ರದ ನಕಲುಗಳೊಂದಿಗೆ ಅಕ್ಟೋಬರ್ 27 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಎಪಿಎಂಸಿ ಯಾರ್ಡ್, ಚೇಂಬರ್ ಆಫ್ ಕಾಮರ್ಸ್ ಎದುರುಗಡೆ ಇರುವ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ನಡೆಯಲಿರುವ ನೇರ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಅಭ್ಯರ್ಥಿಗಳು ಹತ್ತನೇ ತರಗತಿ ಉತ್ತೀರ್ಣರಾಗಿದ್ದು, ಕಡ್ಡಾಯವಾಗಿ 18 ರಿಂದ 50 ವರ್ಷದೊಳಗಿನವರಿರಬೇಕು. ನಿರುದ್ಯೋಗಿ ಹಾಗೂ ಸ್ವಯಂ ಉದ್ಯೋಗನಿರತ ಯುವಕರು, ವಿಮಾ ಕಂಪನಿಗಳ ಸಲಹೆಗಾರರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿಯ ಮಾಜಿ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡು ಬಂದ ಯಾವುದೇ ಅಭ್ಯರ್ಥಿಗಳಿಗೆ ಆಯ್ಕೆಯಾದ ಪಕ್ಷದಲ್ಲಿ ಅವಕಾಶ ನೀಡಲಾಗುವುದು. ಅಭ್ಯರ್ಥಿಗಳು ಬೇರೆ ಯಾವುದೇ ವಿಮಾ ಕಂಪನಿ/ಸಂಸ್ಥೆ / ಸಂಘಗಳ ಏಜೆಂಟ್ ಆಗಿರಬಾರದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಕಾಂತರಾಜ ವರದಿ ಬಿಡುಗಡೆಗೆ ಆಗ್ರಹಿಸಿ ಅ.18ರಂದು ಬೃಹತ್ ಪ್ರತಿಭಟನೆ

# ಶೋಷಣೆಗೆ ಒಳಗಾದವರ ಮಾಹಿತಿ ಬಿಡುಗಡೆ ಅವಶ್ಯ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಕಾಂತರಾಜ್ ವರದಿ ಬಿಡುಗಡೆಗೆ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿ ಪಟ್ಟಣದಲ್ಲಿ ಅ.18ರಂದು ಪ್ರತಿಭಟನೆ ನಡೆಸುತ್ತೇವೆ ಎಂದು ಕಾಂತರಾಜ್ ವರದಿ ಜಾರಿ ಸಮನ್ವಯ ಹೋರಾಟ ಸಮಿತಿ ತಾಲೂಕು ಘಟಕದ ಮುಖಂಡ ಎಂ.ಎಸ್ ಹಡಪದ ಹೇಳಿದರು.

ಅ.18ರಂದು ನಡೆಯುವ ಪ್ರತಿಭಟನೆಯ ಹಿನ್ನೆಲೆಯಲ್ಲಿ ರವಿವಾರ ಇಲ್ಲಿನ ವೀರಗಂಟಿ ಮಡಿವಾಳ ಮಾಚಿದೇವರ ಸಮುದಾಯ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಹಿಂದುಳಿದ ವರ್ಗಕ್ಕೆ ಶೇ.27 ಮೀಸಲಾತಿಯನ್ನು ಜಾರಿಗೆ ತರದಂತೆ ಕೆಲ ಶಕ್ತಿಗಳ ವಿರೋಧದ ನಡುವೆ



ಮೀಸಲಾತಿ ಸಿಕ್ಕಿದೆ. ಆದರೆ ಸಿಕ್ಕ ಮೀಸಲಾತಿಯಲ್ಲಿ ಯಾರಿಗೆ ಎಷ್ಟು ಪ್ರಮಾಣದಲ್ಲಿ ಲಾಭ ಸಿಕ್ಕಿದೆ, ಅಭಿವೃದ್ಧಿ ಮೀಸಲಿಟ್ಟ ಹಣವು ಯಾವ ತಳ ಸಮುದಾಯಗಳಿಗೆ ಸಿಕ್ಕಿದೆ ಎಂಬ ಸ್ಪಷ್ಟತೆಯಿಲ್ಲ. ಹೀಗಾಗಿ ಹಿಂದುಳಿದ ವರ್ಗದಲ್ಲಿ ಶೋಷಣೆಗೆ ಒಳಗಾದವರ ಅಂಕಿ–ಸಂಖ್ಯೆ ಬಿಡುಗಡೆ ಅವಶ್ಯಕವಾಗಿದೆ. ಪ್ರಾತಿನಿಧಿತ್ವ ಮತ್ತು ಅವಕಾಶ ವಂಚಿತವಾಗಿರುವ ಪರಿಣಾಮ ವಿಧಾನಸಭೆ, ಲೋಕಸಭೆಯಲ್ಲಿ ತ ಳ ಸ ವ ು ದಾ ಂ ು ದಿ ಂ ದ ಆಯ್ಕೆಯಾಗಿಲ್ಲ.

ನಾವು ಹೆಸರಿಗೆ ಮಾತ್ರ ಲಿಂಗಾಯತರು, ಇಂದಿಗೂ ಲಿಂಗಾಯತರಲ್ಲಿನ ಒಳಪಂಗಡಗಳು ಮತ್ತು ಅಸ್ಪೃಶತೆ ಆಚರಣೆಯಿಂದ ಅ ವ ವ ಾ ನ ಕ್ಕಿ ಡಾ ಗ ು ವ ಸಮುದಾಗಳಾಗಿದ್ದೇವೆ. ಸರ್ಕಾರವು ಕಾಂತರಾಜು ವರದಿಯನ್ನು ಬಿಡುಗಡೆಗೊಳಿಸಿ ನಮಗೆ ನ್ಯಾಯ ನೀಡಬೇಕು ಎಂದರು.

ಮಡಿವಾಳ ಮಾಚಿದೇವ ಸಮಾಜದ ಅಧ್ಯಕ್ಷ ದೇವಪ್ಪ ಮಡಿವಾಳರ ಮಾತನಾಡಿ, ಸಂವಿಧಾನ ಬದ್ಧವಾಗಿ ನಮಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅದರಂತೆ ಹಿಂದುಳಿದ ವರ್ಗಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹೊಂದಿರುವ ಸ್ಥಾನಮಾನಗಳನ್ನು ತಿಳಿಯಲು ಕಾಂತರಾಜು ವರದಿ ಬಿಡುಗಡೆ ಅವಶ್ಯಕವಾಗಿದೆ ಎಂದರು.

ಈ ವೇಳೆ ಹಪಡಪ ಅಪ್ಪಣ್ಣ ಸಮಾಜದ ಅಧ್ಯಕ್ಷ ಚಿದಾನಂದಪ್ಪ ಹಡಪದ, ಕುಂಬಾರ ಸಮಾಜದ ಬಿ.ಎಂ ಕುಂಬಾರ, ಮಹಾದೇವಪ್ಪ ಮಡಿವಾಳರ, ಮಂಜುನಾಥ ಹೂಗಾರ, ಶಿವಾನಂದ ಮಡಿವಾಳರ, ಕಳಕಪ್ಪ ಮಡಿವಾಳರ, ಪರಶುರಾಮ ಮಡಿವಾಳರ, ಮಂಜು ಮಡಿವಾಳರ ಇದ್ದರು.

ಹೂಗಾರ ಸಮಾಜದ ಅಧ್ಯಕ್ಷ ಶಶಿಧರ ಹೂಗಾರ ಮಾತನಾಡಿ, ಸರ್ಕಾರಿ ಸೌಲಭ್ಯ, ಆರ್ಥಿಕ ಪ್ರಗತಿಗೆ ಹಾಗೂ ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಮಡಿವಾಳ, ಕುಂಬಾರ, ಹಡಪದ ಹಾಗೂ ಹೂಗಾರ ಸಮುದಾಯಗಳಿಗೆ ನೀಡಲಾಗಿಲ್ಲ. ಸಿಎಂ ಸಿದ್ದರಾಮಯ್ಯ ಅವರು ತುಳಿತಕ್ಕೆ ಹಾಗೂ ಅನ್ಯಾಯಕ್ಕೆ ಒಳಗಾದ ಸಮುದಾಯಗಳ ಪರ ಆಡಳಿತ ನಡೆಸುತ್ತಾ ಬಂದಿದ್ದಾರೆ. ಹಿಂದುಳಿದ ವರ್ಗಗಳಲ್ಲಿನ ಸಣ್ಣ ಮತ್ತು ತುಳಿತಕ್ಕೆ ಒಳಗಾದ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರವು ಕಾಂತರಾಜು ವರದಿಯನ್ನು ಬಿಡುಗಡೆಗೆ ಮುಂದಾಗಬೇಕು ಎಂದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545



ಗದಗ ನಗರದ ವಿಡಿಎಸ್ ಕ್ಲಾಸಿಕ್ ಪ್ರಾಥಮಿಕ ಶಾಲೆಯ ಗುರುಮಾತೆಯರು ನವರಾತ್ರಿ ಸಂಭ್ರಮಾಚರಣೆಯ ಎರಡನೇ ದಿನ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟು ಸಂಭ್ರಮಿಸಿದರು.



ಮುಂಡರಗಿ ಪಟ್ಟಣದ ಅಂಬಾಭವಾನಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಮೊದಲ ದಿನದ ಘಟಸ್ಥಾಪನೆ ಕಾರ್ಯಕ್ರಮ ನೆರವೇರಿಸಲಾಯಿತು. ಬೆಳಿಗ್ಗೆ ದೇವಿಗೆ ಬಂಗಾರ ಕಿರೀಟ ಧಾರಣೆ, ವಿಶೇಷ ಅಲಂಕಾರ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು.



67ನೇಯ ದಮ್ಮಚಕ್ರ ಪ್ರವರ್ತನಾ ದಿನಾಚರಣೆ ನಿಮಿತ್ತ ಗದಗ-ಬೆಟಗೇರಿ ನಗರಸಭೆಯ ಆವರಣದಲ್ಲಿರುವ ಡಾ. ಬಿ.ಆರ್ ಅಂಬೇಡ್ಕರರ ಪುತ್ಥಳಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರವಾದ) ರಾಜ್ಯ ಸಮಿತಿಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಗದಗ ಜಿಲ್ಲಾ ಪ್ರಧಾನ ಸಂಚಾಲಕ ಬಾಲರಾಜ ಅರಬರ, ಜಿಲ್ಲಾ ಸಂಘಟನಾ ಸಂಚಾಲಕ ನಾಗರಾಜ ಗೋಕಾವಿ, ಮಹಿಳಾ ಘಟಕದ ಪೂಜಾ ಬೇವೂರ ಮುಂತಾದವರು ಉಪಸ್ಥಿತರಿದ್ದರು.

## ನಿಧನ ವಾರ್ತೆ

### ಮಂಜುಳಾ ಅಶೋಕ ಈರಗಾರ



**ಹುಬ್ಬಳ್ಳಿ:** ಇಲ್ಲಿನ ಸಾಯಿನಗರದ ನಿವಾಸಿ ಮಂಜುಳಾ ಅಶೋಕ ಈರಗಾರ (49) ಭಾನುವಾರ ನಿಧನರಾದರು. ಮೂಲತಃ ಕುಂದಗೋಳ ತಾಲೂಕಿನ ರೊಟ್ಟಿಗವಾಡ ಗ್ರಾಮದವರಾದ ಇವರು, ಪತಿ ಕಿರೇಸೂರ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಎ.ಎಫ್ ಈರಗಾರ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಪಾರ್ಥಿವ ಶರೀರದ ಅಂತ್ಯಕ್ರಿಯೆ ವಿದ್ಯಾನಗರ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ಜರುಗಿತು.

ರಸ್ತೆ ಕಾಮಗಾರಿ ಪೂರ್ಣಗೊಳಿಸಿ, ಟ್ರಾಫಿಕ್ ಸಮಸ್ಯೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಒತ್ತಾಯ

# ಟ್ರಾಫಿಕ್ ಸಮಸ್ಯೆಯಿಂದ ಜನ ಹೈರಾಣ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಮುಖ್ಯ ಬಜಾರ್ ರಸ್ತೆಯಲ್ಲಿ ನಿತ್ಯ ಟ್ರಾಫಿಕ್ ಕಿರಿಕಿರಿ ಹೆಚ್ಚುತ್ತಿದ್ದು, ಸಂಬಂಧಪಟ್ಟ ಪುರಸಭೆ ಮತ್ತು ಪೊಲೀಸ್ ಇಲಾಖೆ ಇತ್ತ ಗಮನ ಹರಿಸಬೇಕೆಂಬುದು ವಾಹನ ಸವಾರರು, ಸಾರ್ವಜನಿಕರು, ವ್ಯಾಪಾರಸ್ಥರ ಒತ್ತಾಸೆಯಾಗಿದೆ.

ಗದಗ ಜಿಲ್ಲೆಯಲ್ಲಿಯೇ ದೊಡ್ಡ ಪಟ್ಟಣವಾಗಿರುವ ಲಕ್ಷ್ಮೇಶ್ವರಕ್ಕೆ ನೆರೆಯ ಶಿರಹಟ್ಟಿ, ಸವಣೂರ, ಶಿಗ್ಗಾಂವ, ಕುಂದಗೋಳ ತಾಲೂಕುಗಳಿಂದ ವ್ಯಾಪಾರ ವಹಿವಾಟು ಮತ್ತಿತರ ಕಾರಣಗಳಿಗಾಗಿ ನಿತ್ಯ ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಬಂದು ಹೋಗುತ್ತಾರೆ. ಆದರೆ ಪಟ್ಟಣದ ಶಿಗ್ಲಿ ಕ್ರಾಸ್‌ನಿಂದ ದೂದಪೀರಾಂ ದರ್ಗಾವರೆ ಮತ್ತು ಸೋಮೇಶ್ವರ ಪಾದಗಟ್ಟಿಯಿಂದ ಹಳೇಬಸ್‌ನಿಲ್ದಾಣದವರೆ, ಸರಾಫ್ ಬಜಾರ್, ಕೃಷ್ಣಾ ಟಾಕೀಜ್ ರಸ್ತೆಗಳು ಸದಾ ವಾಹನ ಸಂಚಾರ ಮತ್ತು ಜನದಟ್ಟಣೆಯಿಂದ ಕೂಡಿರುತ್ತವೆ. ಕಳೆದ ಹತ್ತಾರು ವರ್ಷಗಳಿಂದಿರುವ ಈ ಸಮಸ್ಯೆ ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಟ್ರಾಫಿಕ್ ನಿಯಂತ್ರಣಕ್ಕೆ ಯಾವುದೇ ನಿರ್ಬಂಧವಿಲ್ಲದ್ದರಿಂದ ಪ್ರಮುಖ ರಸ್ತೆಗಳಲ್ಲಿ ಎರ್ರಾಬಿರ್ರಿ ಸಂಚಾರ, ಎಲ್ಲೆಂದರಲ್ಲಿ ವಾಹನ ನಿಲುಗಡೆ, ಬೀದಿ ವ್ಯಾಪಾರ, ಫುಟ್‌ಪಾತ್ ಅತಿಕ್ರಮಣ ಸಮಸ್ಯೆಗೆ ಕಾರಣವಾಗಿದೆ.

> ಪಟ್ಟಣದ ಮುಖ್ಯ ಬಜಾರ್ ರಸ್ತೆ, ಹಳೆ ಬಸ್‌ನಿಲ್ದಾಣದ ರಸ್ತೆ, ಸರಾಫ್ ಬಜಾರ್ ರಸ್ತೆಗಳಲ್ಲಿ ನಿತ್ಯವೂ ಟ್ರಾಫಿಕ್ ಸಮಸ್ಯೆಯಿಂದ ನಾಗರಿಕರು ಹೈರಾಣಾಗುತ್ತಿದ್ದಾರೆ. ನಿತ್ಯ ಜಗಳ, ತಂಟೆ ತಕರಾರು ಸಾಮಾನ್ಯವಾಗಿದೆ. ಪೊಲೀಸ್ ಮತ್ತು ಪುರಸಭೆಯವರು ತಮಗೆ ಸಂಬಂಧವೇ ಇಲ್ಲ ಎನ್ನುವಂತೆ ಈ ಸಮಸ್ಯೆಯನ್ನು ಸಂಪೂರ್ಣ ನಿರ್ಲಕ್ಷಿಸಿದ್ದಾರೆ. ಕಳೆದ ನಾಲ್ಕೈದು ತಿಂಗಳಿಂದ ನಡೆಯುತ್ತಿರುವ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ಟ್ರಾಫಿಕ್ ಸಮಸ್ಯೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.
>
> **- ಮಂಜುನಾಥ ಹೊಗೆಸೊಪ್ಪಿನ.**
> ಬೀದಿಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ.

ಈ ಬಗ್ಗೆ ಪುರಸಭೆ ಮತ್ತು ಪೊಲೀಸ್ ಇಲಾಖೆಯವರು ಬಜಾರ್ ರಸ್ತೆ ಕಾಮಗಾರಿ ಮುಗಿಯಲಿ, ಜಂಟಿ ಸಭೆ ನಡೆಸಿ ತೀರ್ಮಾನಿಸುತ್ತೇವೆ ಎಂಬಿತ್ಯಾದಿ ಕಾರಣ ಹೇಳುತ್ತಾ ದಿನ ದೂಡುತ್ತಿದ್ದು, ಸಮಸ್ಯೆ ಮಾತ್ರ ಪರಿಹಾರ ಕಾಣುತ್ತಿಲ್ಲ. 8 ವರ್ಷಗಳ ಹಿಂದೆ ಪಿಎಸ್‌ಐ ರವಿಚಂದ್ರ ಬಡಫಕ್ಕೀರಪ್ಪನವರ ಏಕಮುಖ ಸಂಚಾರ, ಲೋಡಿಂಗ್-ಅನ್‌ಲೋಡಿಂಗ್‌ಗೆ ಸಮಯ ನಿಗದಿ, ವಾಹನ ನಿಲಗಡೆಗೆ ಮಾರ್ಕಿಂಗ್, ಖಾಯಂ ಸಿಬ್ಬಂದಿ ನಿಯೋಜನೆ ಸೇರಿ ಸೂಕ್ತ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದರು.

ಅವರ ವರ್ಗಾವಣೆ ನಂತರ ಎಲ್ಲವನ್ನೂ ಗಾಳಿಗೆ ತೂರಲಾಯಿತು. ಇತ್ತೀಚೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಅವರು ಖುದ್ದಾಗಿ ಟ್ರಾಫಿಕ್ ಸಮಸ್ಯೆ ಪರಿಶೀಲಿಸಿ ರಸ್ತೆ ಕಾಮಗಾರಿ ಮುಗಿಯುತ್ತಿದ್ದಂತೆಯೇ ಪರಿಹಾರ ಕ್ರಮ ಕೈಗೊಳ್ಳಿ ಎಂದು ಪುರಸಭೆ ಮತ್ತು ಪೊಲೀಸರಿಗೆ ತಿಳಿಸಿದ್ದರು.



ಮುಖ್ಯ ಬಜಾರ್ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದಿರುವ ರಸ್ತೆಯ ಎರಡೂ ಬದಿಯ ಪೇವರ್ಸ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡ ಬಳಿಕ ಪೊಲೀಸ್, ಪುರಸಭೆ ಮತ್ತು ವ್ಯಾಪಾರಸ್ಥರ ಸಹಯೋಗದಲ್ಲಿ ಸಭೆ ನಡೆಸಿ ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ ಅಧಿಕಾರಿಗಳು.


## ಮಹರ್ಷಿ ವಾಲ್ಮೀಕಿ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ಸೂಚನೆ

■ವಿಜಯಸಾಕ್ಷಿ ಸುದ್ದಿ, ಗದಗ

ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅಕ್ಟೋಬರ್ 28 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರದಂದು ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸುವ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಷ್ಟಾಚಾರದನ್ವಯ ಜಯಂತಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯ ಮುದ್ರಣಕ್ಕೆ ಕ್ರಮ ವಹಿಸಬೇಕು ಹಾಗೂ ಕಾರ್ಯಕ್ರಮಕ್ಕೆ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಬೇಕು. ಮಹರ್ಷಿ ವಾಲ್ಮೀಕಿಯವರ ಜೀವನ ಚರಿತ್ರೆ ಕುರಿತು ಆಳವಾಗಿ ಅಧ್ಯಯನ ಮಾಡಿದವರಿಗೆ ಅಂದು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಬೇಕು. ಜಯಂತಿ ದಿನದಂದು ಕಾರ್ಯಕ್ರಮದ ಸ್ಥಳಕ್ಕೆ ಎಲ್ಲ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಆಯಾ ಶಾಲಾ ಮುಖ್ಯಸ್ಥರಿಗೆ ಸೂಚನೆ ನೀಡಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.



ಇದೇ ಜಿಲ್ಲೆಯವರಾದ ವಾಲ್ಮೀಕಿ ಸಮಾಜದ ಇಸ್ರೋದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಸವರಾಜ ಕಲ್‌ಕುಟಿಕರ್ ಅವರನ್ನು ಜಯಂತಿ ಕಾರ್ಯಕ್ರಮದಂದು ಸನ್ಮಾನಿಸುವ ಕುರಿತು ಇರುವ ಬೇಡಿಕೆಯನ್ನು ಸಮುದಾಯದವರು ಸಭೆಯ ಗಮನಕ್ಕೆ ತಂದಾಗ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಅವರಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯದ ಗಣ್ಯರು, ವಾಲ್ಮೀಕಿ ದೇವಸ್ಥಾನದ ಸುತ್ತಮುತ್ತಲಿನ ಸ್ವಚ್ಛತೆ , ವಾಲ್ಮೀಕಿ ಭವನದಲ್ಲಿನ ಮೂಲಭೂತ ಸೌಕರ್ಯಗಳ ಒದಗಿಸುವಿಕೆ, ಸಮುದಾಯದವರಿಗೆ ಸ್ಕಾಲರ್ ಶಿಪ್ ಹಣದ ವಿತರಣೆ ಕುರಿತು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್.ನೀಲಗುಂದ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಗಂಗಪ್ಪ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಶಿಕಾಂತ ಕೋಟಿಮನಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ್ , ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ವಾಲ್ಮೀಕಿ ಸಮಾಜದ ಅಧ್ಯಕ್ಷರಾದ ಬಸಣ್ಣ ಬೆಳದಡಿ ಸೇರಿದಂತೆ ಸಮುದಾಯದ ಮುಖಂಡರು, ಗಣ್ಯ ವ್ಯಕ್ತಿಗಳು, ಸರ್ವ ಸದಸ್ಯರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ದೇವೀ ಪುರಾಣ ಕೇವಲ ಯುದ್ಧದ ಕಥೆಯಲ್ಲ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಅರಿಷಡ್ವರ್ಗಗಳನ್ನು ಅಳಿಸುವ ದೇವಿ ಪುರಾಣವು ಮಾನವನ ದೇಹದ ಪುರಾಣವಾಗಿದ್ದು, ಈ ಪುರಾಣವನ್ನು ಶ್ರದ್ಧಾ-ಭಕ್ತಿಯಿಂದ ಆಲಿಸಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಶಂಕ್ರಯ್ಯಶಾಸ್ತ್ರೀಗಳು ಹಿರೇಮಠ ಅವರು ಸಲಹೆ ನೀಡಿದರು.

ಇಲ್ಲಿಯ ದಂಡಿನ ದುರ್ಗಾದೇವಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಪ್ರಾರಂಭವಾದ 23ನೇ ವರ್ಷದ ದೇವಿ ಪುರಾಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇದು ಕೇವಲ ದೇವಿ ಮತ್ತು ರಾಕ್ಷಸರ ನಡುವೆ ನಡೆದ ಯುದ್ಧದ ಕಥೆಯಲ್ಲ. ಚಿದಾನಂದ ಅವಧೂತರು ರಚಿಸಿದ ಈ ಪುರಾಣದ ಪ್ರತಿ ಅಧ್ಯಾಯದಲ್ಲಿ ಮನುಷ್ಯನ ಚಾರಿತ್ರ್ಯವನ್ನು ತಿದ್ದುವ ಮತ್ತು ದಿನಚರಿಯನ್ನೇ ಬದಲಾಯಿಸುವ ವಿಷಯವನ್ನೊಳಗೊಂಡಿದ್ದು, ಶ್ರದ್ಧಾಭಕ್ತಿಯಿಂದ ಭಾಗವಹಿಸಬೇಕು ಎಂದು ಕರೆ ನೀಡಿದರು.

ಗ್ರಾ.ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಮಾತನಾಡಿ, ಒಂಬತ್ತು ದಿನಗಳ ಕಾಲ ನಡೆಯುವ ಈ ಪುರಾಣದಲ್ಲಿ ಗ್ರಾಮಸ್ಥರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.



ದುರ್ಗಾದೇವಿ ಸೇವಾ ಸಮಿತಿಯ ಅಧ್ಯಕ್ಷ ರುದ್ರಪ್ಪ ಮುಸ್ಕಿನಭಾವಿ ಮಾತನಾಡಿ, ಪ್ರತಿ ವರ್ಷ ನಡೆಯುವ ಪುರಾಣ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಲು ಯುವಕರ ಪಾತ್ರ ಅವಶ್ಯವಿದ್ದು ಮುಂದಿನ ವರ್ಷದಿಂದ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಸಿಕೊಂಡು ಹೋಗಬೇಕೆಂದು ವಿನಂತಿಸಿಕೊಂಡರು. ಗ್ರಾ.ಪಂ ಮಾಜಿ ಉಪಾಧ್ಯಕ್ಷೆ ಪ್ರೇಮಾ ಮಟ್ಟಿ ಮಾತನಾಡಿದರು.

ಕೊಟ್ರಯ್ಯಶಾಸ್ತ್ರೀಗಳು ನರಗುಂದಮಠ ಅವರು ಪುರಾಣ ಪ್ರವಚನ ಆರಂಭಿಸಿದರು. ಮಾನಪ್ಪ ಬಡಿಗೇರ ಪಠಣ ಮಾಡಿದರು. ಮಂಜುನಾಥ ಗರ್ಜಪ್ಪನವರ, ಈರಪ್ಪ ಕರಿಯಲ್ಲಪ್ಪನವರ ಸಂಗೀತ ಸೇವೆ ನೀಡಿದರು.

ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸದಸ್ಯರಾದ ಲಕ್ಷ್ಮಣ ಗುಡಸಲಮನಿ, ಈರಮ್ಮ ಚಬ್ಬರಭಾವಿ, ಫಕ್ಕಿರವ್ವ ಬೇಲೇರಿ, ಚಂದ್ರವ್ವ ರಿತ್ತಿ, ಚನ್ನಯ್ಯ ಪತ್ರಿಮಠ, ನೀಲವ್ವ ವಡ್ಡರ ವೇದಿಕಯಲ್ಲಿದ್ದರು. ನಜೀರಅಹ್ಮದ ಕಿರಿಟಗೇರಿ ನಿರೂಪಿಸಿ ವಂದಿಸಿದರು.

## ಜಿಲ್ಲಾ ಕೇಂದ್ರಗಳಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯ ಬಿಜೆಪಿ ಜಿಲ್ಲಾ ಕೇಂದ್ರಗಳಲ್ಲಿ ಸರ್ಕಾರದ ವಿರುದ್ಧ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದೆ.

ಇತ್ತೀಚೆಗೆ ನಡೆದ ಐಟಿ ದಾಳಿಯಲ್ಲಿ, ಮಾಜಿ ಕಾರ್ಪೊರೇಟರ್ ಬಳಿ ಇದ್ದ 42 ಕೋಟಿ ರೂಪಾಯಿಯೂ ಸೇರಿ 50 ಕೋಟಿ ರೂಪಾಯಿ ನಗದು ಪತ್ತೆಯಾದ ಹಿನ್ನಲೆಯಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ ಬಿಜೆಪಿ ಪ್ರತಿಭಟನೆ ನಡೆದಿದೆ.

ಐಟಿ ದಾಳಿಯ ವೇಳೆ ಪತ್ತೆಯಾದ ಹಣಕ್ಕೂ ಕಾಂಗ್ರೆಸ್‌ಗೂ ಸಂಬಂಧವಿದೆ ಎಂದು ಬಿಜೆಪಿ ಆರೋಪಿಸಿದೆ. ಕಾಂಗ್ರೆಸ್‌ನ ಎಟಿಎಂ ಸರ್ಕಾರ, 5 ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ಹಣ ಕಳಿಸಲು, ಹಣವನ್ನು ಸಂಗ್ರಹಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

## ಚದುರಂಗ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಅ.12ರಿಂದ 14ರವರೆಗೆ ಬೆಂಗಳೂರಿನ ಆನೇಕಲ್ ತಾಲೂಕು ಬೋಮ್ಮಸಂದ್ರದಲ್ಲಿ ಕರ್ನಾಟಕ ಸರ್ಕಾರ, ಶಾಲಾ ಸಾಕ್ಷರತಾ ಇಲಾಖೆಯ ವತಿಯಿಂದ ನಡೆದ 2023-24ನೇ ಸಾಲಿನ ರಾಜ್ಯ ಮಟ್ಟದ 14 ವರ್ಷದೊಳಗಿನ ಬಾಲಕರ ಚದುರಂಗ ಸ್ಪರ್ಧೆಯಲ್ಲಿ ಗದಗ ಶಹರ ವಲಯದ ಲೋಯಲಾ ಪ್ರೌಢಶಾಲೆಯ ವಿದ್ಯಾರ್ಥಿಯಾದ ನಂದಕುಮಾರ ವೀರೇಶ ಸೂಳಿಕೇರಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

2022-23ನೇ ಸಾಲಿನಲ್ಲಿ ನಡೆದ ಸ್ಪರ್ಧೆಯಲ್ಲಿಯೂ ಈ ವಿದ್ಯಾರ್ಥಿ ರಾಜ್ಯಮಟ್ಟದಲ್ಲಿ ಭಾಗವಹಿಸಿ 9 ಸುತ್ತಿನಲ್ಲಿ 6 ಸುತ್ತು ಜಯ ಸಾಧಿಸಿ ಉತ್ತಮ ಸಾಧನೆಯನ್ನು ತೋರಿದ್ದನು. ಈ ಬಾರಿ 9 ಸುತ್ತಿನ ಸ್ಪರ್ಧೆಗಳಲ್ಲಿ 8 ಸುತ್ತಿನಲ್ಲಿ ಉತ್ತಮ ಪ್ರದರ್ಶನ ನೀಡಿ ಗೆಲುವು ಸಾಧಿಸಿದ್ದಾನೆ. ಗದಗ ಜಿಲ್ಲೆಯ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿಯನ್ನು ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಆರ್.ಎಸ್ ಬುರಡಿ, ಗದಗ ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಎಸ್ ಕುಚಬಾಳ, ಗದಗ ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ಆರ್.ವಿ ವರ್ಣೇಕರ್, ಉಪಾಧ್ಯಕ್ಷ ಎಸ್.ಎಂ ಉಮ್ಮಣ್ಣವರ, ಶ್ರೀಕಾಂತ್ ಪೂಜಾರ, ಚಂದ್ರಶೇಖರ್ ದೊಡ್ಡಮನಿ, ನಿಜಗುಣಿ ಕಂಬಳಿ, ತಾಲೂಕು ದೈಹಿಕ ಶಿಕ್ಷಣ ನಿರ್ದೇಶಕ ಜಗದೀಶ ಜಿ.ಎಂ, ಸಹಿಪ್ರಾ ಶಾಲೆ ನಂ.12ರ ಮುಖ್ಯಶಿಕ್ಷಕ ಎಚ್.ಆರ್ ಕೋಣಿಮನಿ, ದೈಹಿಕ ಶಿಕ್ಷಕ ಎಸ್.ಬಿ ಮುಳಗುಂದ, ಲಾಜರಸ್ ಮುಂತಾದವರು ಕ್ರೀಡಾಪಟುವಿನ ಮನೆಗೆ ಹೋಗಿ ಸನ್ಮಾನಿಸಿ ಗೌರವಿಸಿದರು.

ವಿದ್ಯಾರ್ಥಿಗೆ ರಾಷ್ಟ್ರಮಟ್ಟದ ಚದುರಂಗ ಸ್ಪರ್ಧೆಗಾಗಿ ಸೂಕ್ತ ತರಬೇತಿಯ ಜೊತೆಗೆ ಖರ್ಚು-ವೆಚ್ಚವನ್ನು ಶಾಲಾ ಸಾಕ್ಷರತಾ ಇಲಾಖೆ ಮತ್ತು ಗದಗ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ನೀಡುವದಾಗಿ ಭರವಸೆ ನೀಡಿದರು.

ಎಸ್ಸಿ-ಎಸ್ಟಿ ಸಮುದಾಯಗಳ ಕುಂದು-ಕೊರತೆ ಸಭೆ । ದಲಿತ ಕಾಲೋನಿಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆಗೆ ಆಕ್ಷೇಪ

# ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸಿ



> ಗಜೇಂದ್ರಗಡ ತಾಲೂಕಿನಲ್ಲಿ ಜರುಗಿದ ಜೋಡಿ ಕೊಲೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು, ಅಪ್ರಾಪ್ತ ಬಾಲಕಿ ಅತ್ಯಾಚಾರ ಪ್ರಕರಣ ಅಪರಾಧಿಗಳಿಗೆ ಕಠಿಣ ಶಿಕ್ಷೆ ಒದಗಿಸಬೇಕು, ಅಕ್ರಮ ಮರಳು, ಅಕ್ರಮ ಸಾರಾಯಿ, ಮಟಕಾ ಸೇರಿದಂತೆ ಇತರೆ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸಿ ಸುಂದರ ಸಮಾಜ ನಿರ್ಮಿಸಬೇಕು ಎಂದು ಉಮೇಶ ರಾಠೋಡ ಸೇರಿದಂತೆ ದಲಿತ ಮುಖಂಡರು ಆಗ್ರಹಿಸಿದರು.

■ವಿಜಯಸಾಕ್ಷಿ ಸುದ್ದಿ, ರೋಣ

ಇಲಾಖೆ ದಲಿತ ಕಾಲೋನಿಗಳಲ್ಲಿ ಮಾತ್ರ ಸಿಸಿ ಕ್ಯಾಮರಾ ಅಳವಡಿಕೆ ಮಾಡಲು ಉದ್ದೇಶಿಸಿದ್ದು ಸಮಂಜಸವಲ್ಲ. ಬದಲಾಗಿ ಎಲ್ಲ ಕಡೆಗಳಲ್ಲಿಯೂ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು ಎಂದು ರೋಣ ಪೊಲೀಸ್ ಠಾಣಾ ಆವರಣದಲ್ಲಿ ಜರುಗಿದ ಎಸ್ಸಿ-ಎಸ್ಟಿ ಸಮುದಾಯಗಳ ಕುಂದು-ಕೊರತೆ ಸಭೆಯಲ್ಲಿ ದಲಿತ ಮುಖಂಡರು ಆಗ್ರಹಿಸಿದರು.

ಸಭೆಯಲ್ಲಿ ಪಿಎಸ್‌ಐ ಎಲ್.ಕೆ ಜೂಲಕಟ್ಟಿಯವರು ಸಿಸಿ ಕ್ಯಾಮರಾ ಅಳವಡಿಕೆ ವಿಷಯ ಪ್ರಸ್ತಾಪಿಸುತ್ತಿದ್ದಂತೆ ಮಧ್ಯ ಪ್ರವೇಶಿಸಿದ ದಲಿತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜೂಲಕಟ್ಟಿಯವರು, 42 ಲಕ್ಷ ರೂಗಳ ವೆಚ್ಚದಲ್ಲಿ ಸಿಸಿ ಕ್ಯಾಮರಾ ಅಳವಡಿಕೆಗೆ ಚಿಂತನೆ ನಡೆಸಲಾಗಿದ್ದು, ಬಸ್ ನಿಲ್ದಾಣ, ಪ್ರಮುಖ ವೃತ್ತಗಳು, ಕಚೇರಿಗಳು ಸೇರಿದಂತೆ ಇತರೆಡೆಗಳಲ್ಲಿಯೂ ಅಳವಡಿಕೆ ಕಾರ್ಯ ನಡೆಯುತ್ತದೆ ಎಂದರು. ಮುಖಂಡ ಪ್ರಕಾಶ ಹೊಸಳ್ಳಿ ಮಾತನಾಡಿ, ರೋಣ ತಹಸೀಲ್ದಾರ್ ಕಚೇರಿಯಲ್ಲಿ ಜಾತೀಯತೆ ಹಾಗೂ ಅಸ್ಪ್ರಶ್ಯತೆ ಜೀವಂತವಾಗಿದ್ದು, ತಹಸೀಲ್ದಾರ್ ಕಚೇರಿಯಲ್ಲಿ ದಲಿತ ವರ್ಗದ ಸಿಬ್ಬಂದಿಗಳು ಕಾರ್ಯನಿರ್ವಹಿಸಲು ತೀವ್ರ ತೊಂದರೆಯಾಗಿದೆ. ದಲಿತ ವರ್ಗದ ಮಹಿಳಾ ಸಿಬ್ಬಂದಿಗಳ ಮೇಲೆ ಅನುಚಿತ ವರ್ತನೆ ತೊರುತ್ತಿರುವವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ರೋಣ ತಾಲೂಕಿನಲ್ಲಿ ಅಕ್ರಮ ಸಾರಾಯಿ ಮಾರಾಟ ಎಗ್ಗಿಲ್ಲದೆ ಸಾಗಿದೆ. ಅಬಕಾರಿ ಇಲಾಖೆಯ ಅಧಿಕಾರಿಗಳು ತಿಂಗಳ ವಂತಿಗೆ ಪಡೆದು ಸುಮ್ಮನಾಗಿದ್ದಾರೆ. ಅಕ್ರಮ ಸಾರಾಯಿ ಮಾರಾಟದಿಂದ ದಲಿತ ಹಾಗೂ ಹಿಂದುಳಿದ ವರ್ಗದ ಜನರು ಹಾಳಾಗುತ್ತಿದ್ದಾರೆ. ಈ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದ ದಲಿತ ಮುಖಂಡರು ಡಿವಾಯ್‌ಎಸ್ಪಿಯವರಲ್ಲಿ ಆಗ್ರಹಿಸಿದರು.

ಡಿವಾಯ್‌ಎಸ್ಪಿ ಪ್ರಭುಗೌಡ ಕೆರದಹಳ್ಳಿ, ಸಿಪಿಐ ಎಸ್.ಎಸ್ ಬಿಳಗಿ, ಮೌನೇಶ ಹಾದಿಮನಿ, ಸಂಜಯ ದೊಡ್ಡಮನಿ, ಬಸವರಾಜ ತಳವಾರ ಸೇರಿದಂತೆ ದಲಿತ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಕರ್ನಾಟಕ ಸರಕಾರ

**ಪುರಸಭೆ ಕಾರ್ಯಾಲಯ, ಮುಂಡರಗಿ – 582118**

ದೂರವಾಣಿ/ಫ್ಯಾಕ್ಸ್ : 08371-206638-262232

Email : itstaff_ulb_mundargi@yahoo.co.in

ಸಂ: ಪುಸಮುಂ/ಪು.ಸ.ಸಾ.ನಿ/ಇ-ಟೆಂಡರ್/2023-24 ದಿನಾಂಕ:13-10-2023

**ಇ-ಟೆಂಡರ್ ಪ್ರಕಟಣೆ**

ಕರ್ನಾಟಕ ಪಾರದರ್ಶಕ ಅಧಿನಿಯಮ 1999 & 2000 ಕೆ.ಪಿ.ಪಿ. ಪೋರ್ಟಲ್‌ದಲ್ಲಿ ಸನ್: 2022-23ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ-1 ದಸ್ತಾವೇಜನಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ : ಪುರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಕಾಮಗಾರಿ. ಅಂದಾಜು ಮೊತ್ತ ರೂ. **38.10** ಲಕ್ಷ ಕಾಮಗಾರಿ ಇಂಡೆಂಟ್ ನಂ. DMA/2023-24/WS/ WORK_INDENT4112 ಕೆ.ಪಿ.ಪಿ. ಪೋರ್ಟಲ್ ದಾಖಲೆಗಳಿಗಾಗಿ ಈ ಮೂಲಕ ಕೆಳಗೆ ನಮೂದಿಸಿದ ದಿನಾಂಕದಂದು ಆನಲೈನ್ ಮೂಲಕವೇ ಟೆಂಡರ ಸಲ್ಲಿಸುವುದು.

(1) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **27-10-2023** ಸಾಯಂಕಾಲ 4.30 ರ ವರೆಗೆ (2) ಟೆಂಡರ ತೆರೆಯುವ ದಿನಾಂಕ : **30-10-2023** ಸಾಯಂಕಾಲ 4.30 ರ ವರೆಗೆ

ಸಹಿ/- ಮುಖ್ಯಾಧಿಕಾರಿ, ಪುರಸಭೆ, ಮುಂಡರಗಿ

ಸಹಿ/- (ಆಡಳಿತಾಧಿಕಾರಿಗಳು) ಪುರಸಭೆ, ಮುಂಡರಗಿ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/259/2023-24

## 'ವನ್ಯಜೀವಿ ಛಾಯಚಿತ್ರ ಸ್ಪರ್ಧೆ'ಯಲ್ಲಿ ರಾಮಣ್ಣ ವಗ್ಗಿ ಪ್ರಥಮ



■ವಿಜಯಸಾಕ್ಷಿ ಸುದ್ದಿ, ಗದಗ

ಅರಣ್ಯ ಇಲಾಖೆಯಿಂದ ಇತ್ತೀಚೆಗೆ 69ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ವನ್ಯಜೀವಿಗಳ ಛಾಯಾಚಿತ್ರ ಸ್ಪರ್ಧೆಯಲ್ಲಿ ವಿಜಯ ಕರ್ನಾಟಕ ದಿನಪತ್ರಿಕೆಯ ಛಾಯಾಗ್ರಾಹಕ ರಾಮಣ್ಣ ವಗ್ಗಿ ಅವರು ಪ್ರಥಮ ಸ್ಥಾನ ಪಡೆದಿದ್ದಾರೆ. ಅವರಿಗೆ ಡಿಸಿಎಫ್ ದೀಪಿಕಾ ಬಾಜಪೇಯಿ ಅವರು ಪ್ರಶಸ್ತಿಪತ್ರ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಆರ್‌ಎಫ್‌ಓ ಸ್ನೇಹಾ ಕೊಪ್ಪಳ, ಡಿಆರ್‌ಎಫ್‌ಓ ಭರತ ಗುಳೇದ, ಬೀಟ್ ಫಾರೆಸ್ಟರ್ ಲತಾ ಜಿ.ಬಿ., ಬಯೋಲಾಜಿಸ್ಟ್ ಕರೋಲಾ ಅಮನ್ನಾ, ವೆಟರ್ನರಿ ಅಸಿಸ್ಟಂಟ್ ನಿಖಿಲ್ ಕುಲಕರ್ಣಿ, ಅಸಿಸ್ಟಂಟ್ ಇಂಜಿನಿಯರ್ ಪ್ರವೀಣ ಬಿದರಿ ಮುಂತಾದವರು ಇದ್ದರು.

ಈಗಾಗಲೇ ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ರಾಮಣ್ಣ ವಗ್ಗಿ ಅವರ ಸಾಧನೆಗೆ ಮತ್ತೊಂದು ಗರಿ ಮೂಡಿದಂತಾಗಿದೆ. ಅವರ ಈ ಸಾಧನೆಗೆ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ, ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಎಚ್.ಎಂ ಶರೀಪನವರ, ಅಜಿತ ಹೊಂಬಾಳಿ ಸೇರಿದಂತೆ ಜಿಲ್ಲಾ ಪದಾಧಿಕಾರಿಗಳು, ಹಿತೈಷಿಗಳು ಹಾಗೂ ಅಭಿಮಾನಿಗಳು ಅಭಿನಂಧಿಸಿದ್ದಾರೆ.

### ಜಮೀನಿಗೆ ನುಗ್ಗಿದ ಬಸಿ ನೀರು | ಶಾಸಕ ಜಿ.ಎಸ್ ಪಾಟೀಲರೆದುರು ಅಳಲು ತೋಡಿಕೊಂಡ ರೈತರು

# ಸಮರ್ಪಕವಾಗಿ ಕೆಲಸ ನಿರ್ವಹಿಸಿ

■ವಿಜಯಸಾಕ್ಷಿ ಸುದ್ದಿ, ರೋಣ

ತಾಲೂಕಿನ ಜಿಗಳೂರ ಗ್ರಾಮದ ಹತ್ತಿರ 310 ಎಕರೆ ಪ್ರದೇಶದಲ್ಲಿ ನಿರ್ಮಾಣವಾದ ಬೃಹತ್ ಕೆರೆಯ ಕಾಮಗಾರಿ ಸಮರ್ಪಕವಾಗಿಲ್ಲ. ಹೀಗಾಗಿ ಕೆರೆಯಲ್ಲಿ ಶೇಖರಣೆಯಾದ ನೀರು ಬಸಿದು ಜಮೀನು ಸೇರಿದಂತೆ ಬೆಳೆಗಳನ್ನು ಸಹ ನಾಶಪಡಿಸುತ್ತಿದೆ ಎಂದು ಸುತ್ತಮುತ್ತಲಿನ ರೈತರು ಶಾಸಕ ಜಿ.ಎಸ್ ಪಾಟೀಲ ಎದುರು ಅಳಲು ತೊಡಿಕೊಂಡರು.

ಜಿಗಳೂರ ಕೆರೆಯ ಸುತ್ತಲೂ ನಿರ್ಮಿಸಿರುವ ತಡೆಗೋಡೆ ಕಾಮಗಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಲ್ಲ. ಹೀಗಾಗಿ ಕೆರೆಯಲ್ಲಿ ಸಂಗ್ರಹವಾಗಿರುವ ನೀರಿನ ತೇವಾಂಶ ಹೆಚ್ಚಾಗಿ, ಪಕ್ಕದ ಜಮೀನುಗಳಿಗೆ ಬರುತ್ತಿದೆ. ಇದರಿಂದ ಭೂಮಿಯಲ್ಲಿನ ಮಣ್ಣು ತನ್ನ ಶಕ್ತಿಯನ್ನು ಕಳೆದುಕೊಂಡು ಜಮೀನಿನಲ್ಲಿರುವ ಬೆಳೆಗಳು ಸಹ ಹಾನಿಗೊಳಗಾಗುತ್ತಿವೆ ಎಂದು ರೈತರು ಶಾಸಕ ಜಿ.ಎಸ್ ಪಾಟೀಲರ ಬಳಿ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ಜಿ.ಎಸ್ ಪಾಟೀಲ ಅಧಿಕಾರಿಗಳೊಂದಿಗೆ ಕೆರೆ ಪ್ರದೇಶಕ್ಕೆ ತೆರಳಿ ವೀಕ್ಷಣೆ ನಡೆಸಿ, ರೈತರೊಂದಿಗೆ ಚರ್ಚಿಸಿದರು.



ಸ್ಥಳದಲ್ಲಿದ್ದ ಜಲ ಮಂಡಳಿ ಅಧಿಕಾರಿ ಬಿ.ಹೊಸಮನಿಯವರು ಜಮೀನಿನಲ್ಲಿ ಶೇಖರಣೆಯಾದ ನೀರು ಕೆರೆಯ ಬಸಿ ನೀರಲ್ಲ. ಬದಲಾಗಿ ಮಳೆ ನೀರು ಆಗಿರಬಹುದು ಎಂದಾಗ, ಸಿಟ್ಟಿಗೆದ್ದ ರೈತರು ಈ ವರ್ಷ ಬರಿಯ ನಮ್ಮ ಊರಲ್ಲ, ನಮ್ಮ ತಾಲೂಕಿನಲ್ಲಿಯೇ ಮಳೆ ಆಗಿಲ್ಲ. ನಿಮ್ಮ ಸಮಜಾಯಿಷಿ ಸರಿಯಲ್ಲ ಎಂದು ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಮಧ್ಯ ಪ್ರವೇಶಿಸಿದ ಶಾಸಕರು, ಸಮಸ್ಯೆಗೆ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬಾರದು. ಬಗೆಹರಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅಭಿಯಂತರರಿಗೆ ಸೂಚಿಸಿದರು. ಅಲ್ಲದೆ ಮಳೆಯಾಗಿದ್ದರೆ ಎಲ್ಲ ಜಮೀನುಗಳಲ್ಲಿ ನೀರು ನಿಲ್ಲಬೇಕಿತ್ತು. ಕೆರೆಯ ಪಕ್ಕದಲ್ಲಿರುವ ಜಮೀನುಗಳಲ್ಲಿ ಮಾತ್ರ ಯಾಕೆ ನಿಂತಿದೆ ಎಂದು ಎಇಇಅವರನ್ನು ಪ್ರಶ್ನಿಸಿದ ಶಾಸಕರು, ಸಮರ್ಪಕವಾಗಿ ಕೆಲಸ ಮಾಡುವಂತೆ ಗುತ್ತಿಗೆದಾರರಿಗೆ ತಿಳಿಸಿದರಲ್ಲದೆ, ಇಲ್ಲದಿದ್ದರೆ ಮತ್ತೊಮ್ಮೆ ಟೆಂಡರ್ ಕರೆದು ಬೇರೆಯವರಿಗೆ ಕೊಡಿ ಎಂದು ಜಲ ಮಂಡಳಿಯ ಅಧಿಕಾರಿಗಳಿಗೆ ಕಟ್ಟನಿಟ್ಟಾಗಿ ಸೂಚಿಸಿದರು.

ಇಇ ಕರಿಸಿದ್ದಪ್ಪ, ವ್ಹಿ.ಬಿ ಸೋಮನಕಟ್ಟಿಮಠ, ಯೂಸುಫ್ ಇಟಗಿ, ಗದಿಗೆಪ್ಪ ಕಿರೇಸೂರ ಸೇರಿದಂತೆ ಜಿಗಳೂರ ಗ್ರಾಮದ ರೈತರು, ಪುರಸಭೆಯ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ತಾಲೂಕಿನಲ್ಲಿ ನಿರೀಕ್ಷೆಯಂತೆ ಮಳೆಯಿಲ್ಲ. ಕೆರೆಯನ್ನು ಶೀಘ್ರವೇ ಶುಚಿಗೊಳಿಸಿ, ಕೆರೆಗೆ ಮಲಪ್ರಭಾ ನದಿಯಿಂದ ನೀರು ತರಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶಾಸಕ ಜಿ.ಎಸ್ ಪಾಟೀಲ ತಿಳಿಸಿದರು.

ಕೆರೆಯಲ್ಲಿ ಸಂಗ್ರಹವಾದ ನೀರು 90 ದಿನಗಳವರೆಗೆ ಬರುತ್ತದೆ. ಕೆರೆಯನ್ನು ಶುಚಿಗೊಳಿಸಲು ಗುತ್ತಿಗೆದಾರರಿಗೆ ತಿಳಿಸಿ, ನೀರು ಶೇಖರಣೆಗೆ ಮುಂಜಾಗ್ರತಾ ಕ್ರಮ ಅನುಸರಿಸಲಾಗುವುದು ಎಂದು ಜಲ ಮಂಡಳಿಯ ಎಇ ಬಿ.ಹೊಸಮನಿ ತಿಳಿಸಿದರು.

## ದುರ್ಗಾದೇವಿಯ ಆರಾಧನೆಯಿಂದ ಸಮೃದ್ಧಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನವರಾತ್ರಿಯ ಕಾಲಘಟ್ಟದಲ್ಲಿ ಅಸುರೀ ಶಕ್ತಿಗಳ ವಿರುದ್ಧ ಧರ್ಮದ ದಂಡಯಾತ್ರೆ ಮತ್ತು ಕೆಟ್ಟದ್ದರ ಮೇಲೆ ಒಳಿತಿನ ವಿಜಯ ನಡೆಯುತ್ತದೆ.

ದುರ್ಗಾದೇವಿಯ ಆರಾಧನೆಯಿಂದ ದುರ್ಗುಣ ದೂರ ಮಾಡಿ ಸಾತ್ವಿಕ ಗುಣ ಹೊಂದುವುದು ನವರಾತ್ರಿ ಆಚರಣೆಯ ಪರಮ ಗುರಿಯಾಗಿದೆ. ಶಿವರಾತ್ರಿ ಮತ್ತು ನವರಾತ್ರಿ ನಮ್ಮನ್ನು ದೈವತ್ವದತ್ತ ನಡೆಸುತ್ತವೆ ಎಂದು ಪಿಎಸ್‌ಐ ಯೂಸೆಫ್ ಜಮೂಲಾ ಹೇಳಿದರು.

ಅವರು ಸೋಮವಾರ ಪಟ್ಟಣದ ಆಸಾರ ಓಣಿಯ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಶ್ರೀ ದುರ್ಗಾದೇವಿ ಪುರಾಣ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ನವರಾತ್ರಿಯ ಸಂದರ್ಭದಲ್ಲಿ ದೇವಿ ಆರಾಧನೆಗೆ ಮಹತ್ವ ನೀಡಲಾಗಿದೆ. ನವರಾತ್ರಿಯಲ್ಲಿ ವಿದ್ಯೆ, ಸಂಪತ್ತು, ಸಮೃದ್ಧಿಯ ಪ್ರತೀಕವಾಗಿರುವ ಜಗನ್ಮಾತೆಯನ್ನು ಸ್ಮರಿಸುವ ಕಾರ್ಯ ಮಾಡಲಾಗುತ್ತದೆ. ಪ್ರತಿವರ್ಷ ನವರಾತ್ರಿ ಸಂದರ್ಭದಲ್ಲಿ ದುರ್ಗಾದೇವಿ ದೇವಸ್ಥಾನದಲ್ಲಿ ದೇವಿಪುರಾಣ ಪ್ರವಚನ ಏರ್ಪಡಿಸುವ ಸಂಪ್ರದಾಯ ನೆರವೇರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಈ ವೇಳೆ ಹಿರಿಯರಾದ ದೇವಣ್ಣ ಬಳಿಗಾರ, ಪುರಸಭೆ ಸದಸ್ಯ ಎಸ್.ಕೆ ಹವಾಲ್ದಾರ್, ಮಂಜುನಾಥ ಮಾಗಡಿ, ತಿಪ್ಪಣ್ಣ ರಟಗೇರಿ, ಅರ್ಚಕ ಮಲ್ಲೇಶಪ್ಪ ಪೂಜಾರ, ಚಂದ್ರು ಮಾಗಡಿ ಮುಂತಾದವರಿದ್ದರು.

ಹನಮಂತಸಾ ಚೌದರಿ ಪುರಾಣ ಪಠಣ ಮತ್ತು ಗಂಗಯ್ಯ ಪೂಜಾರ ಪುರಾಣ ಪ್ರವಚನ ನೀಡಿದರೆ, ಎಲ್.ಆರ್ ಮಲ್ಲಸಮುದ್ರ ಸಂಗೀತ ಸೇವೆ ನೀಡಿದರು. ಜಿ.ಎಸ್ ಗುಡಗೇರಿ ಕಾರ್ಯಕ್ರಮ ನಿರ್ವಹಿಸಿದರು.

## ಧರ್ಮ ಜಾಗೃತಿ, ಧಾರ್ಮಿಕ ಕಲ್ಪನೆಗಳು ಉಳಿಯಬೇಕು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಗ್ರಾಮದೇವತೆ ಶ್ರೀ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ ಶ್ರೀಮಳೆ ಮಲ್ಲಿಕಾರ್ಜುನ ಶಿವಾಚಾರ್ಯರು ದುರ್ಗಾದೌಡಗೆ ಚಾಲನೆ ನೀಡಿದರು. ಭಗವಾಧ್ವಜ ಮತ್ತು ದೇವಿಯ ಆಯುಧ ತ್ರಿಶೂಲಕ್ಕೆ ಪೂಜೆ ಸಲ್ಲಿಸಿ, ನವದೇವತೆಗಳ ಘೋಷಣೆ ಮೊಳಗಿಸುವ ಮೂಲಕ ಭಕ್ತರು ಮೊದಲ ದಿನದ ಧಾರ್ಮಿಕ ನಡಿಗೆಯು ದ್ಯಾಮವ್ವ ದೇವಿ ದೇವಸ್ಥಾನದಿಂದ ಹೊರಟು ಸಣ್ಣದ್ಯಾಮವ್ವ ದೇವಸ್ಥಾನದಲ್ಲಿ ಮುಕ್ತಾಯವಾಯಿತು.

ಕಾರ್ಯಕ್ರಮದ ರೂವಾರಿ, ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ವೇದಿಕೆ ಅಧ್ಯಕ್ಷ ಗುರುನಾಥ ದಾನಪ್ಪನವರ ಮಾತನಾಡಿ, ಯುವಕರಲ್ಲಿ ಧರ್ಮ ಜಾಗೃತಿ ಹೆಚ್ಚಿಸುವ ಉದ್ದೇಶವು ಈ ಕಾರ್ಯಕ್ರಮದ್ದಾಗಿದೆ. ಧಾರ್ಮಿಕ ನೆಲೆಗಟ್ಟಿನ ಮೇಲೆ ಹಬ್ಬದ ಆಚರಣೆಯಾಗಬೇಕಿದ್ದು, ಎಲ್ಲರೂ ಸಮಾನತೆಯಿಂದ ಪಾಲ್ಗೊಳ್ಳುತ್ತಿದ್ದಾರೆ ಎಂದರು.

ದಸರಾ ಉತ್ಸವ ಸಮಿತಿ ಅಧ್ಯಕ್ಷ ಬಸವರಾಜ ಅರಳಿ ಮಾತನಾಡಿದರು. ಹಿರಿಯ ಮುಖಂಡ ಮಹೇಶ ಹೊಗೆಸೊಪ್ಪಿನ, ಭರಮಗೌಡ್ರ ಪಾಟೀಲ, ಶಿವನಗೌಡ್ರ ಪಾಟೀಲ, ವೆಂಕರಡ್ಡಿ ಗಿರಡ್ಡಿ, ಬಸವರಾಜ ಹೊಗೆಸೊಪ್ಪಿನ, ರಾಜಶೇಖರ ಶಿಗ್ಲಿಮಠ, ಜ್ಞಾನೋಭಾ ಬೋಮಲೆ, ರವಿ ಲಿಂಗಶೆಟ್ಟಿ, ಮಲ್ಲನಗೌಡ ಪಾಟೀಲ, ಬಸವರಾಜ ದಾನಿ, ಮುದಕಪ್ಪ ಮುಳಗುಂದ, ಶಿವಪ್ಪ ಡಂಬಳ, ಯಲ್ಲಪ್ಪ ಕೋರದಾಳ, ಹನುಮಂತಪ್ಪ ಗಡೇದ, ಮಂಜು ಬಳಿಗಾರ, ಪ್ರವೀಣ ಪಾಟೀಲ, ದೇವಪ್ಪ ಗಡೇದ, ಮಲ್ಲನಗೌಡ ಪಾಟೀಲ, ರಾಜೇಶ್ವರಿ ದಾನಪ್ಪನವರ, ಸುಜಾತಾ ಅತ್ತಿಗೇರಿ, ಪುಷ್ಪಾ ಅರಳಿ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

### ರಸ್ತೆ ಅಪಘಾತದ ದುರ್ಘಟನೆಯ ಕುರಿತು ನೋವು ವ್ಯಕ್ತಪಡಿಸಿದ ಜ. ಫಕೀರ ಸಿದ್ದರಾಮ ಶ್ರೀಗಳು

## ಜೀವನದಲ್ಲಿ ನಾನು ಕಂಡ ಅತ್ಯಂತ ದುರಂತದ ಘಟನೆಯಿದು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಸೋಮವಾರ ನರೇಗಲ್ಲದ ಹೊರ ವಲಯದಲ್ಲಿ ನಡೆದ ಅಪಘಾತದ ಘಟನೆಯಿಂದ ನಮ್ಮ ಮನಸ್ಸಿಗೆ ಹೇಳತೀರದಷ್ಟು ನೋವಾಗಿದೆ. ನನ್ನ ಜೀವನದಲ್ಲಿ ನಾನು ಕಂಡ ಅತ್ಯಂತ ಕಹಿ ಘಟನೆ ಇದಾಗಿದೆ. ನಮ್ಮ ಶ್ರೀಮಠದ ಆಪ್ತ ಭಕ್ತರು ಹೀಗೆ ದಾರಿ ಮಧ್ಯೆ ಸಾವಿಗೀಡಾಗಿರುವುದು ಸಹಿಸಲಸಾಧ್ಯವಾದ ನೋವನ್ನುಂಟು ಮಾಡಿದೆ ಎಂದು ಶಿರಹಟ್ಟಿ ಫಕೀರೇಶ್ವರ ಮಠದ ಜ. ಫಕೀರ ಸಿದ್ದರಾಮ ಮಹಾಸ್ವಾಮಿಗಳು ನೋವಿನಿಂದ ನುಡಿದರು.

ಮೃತರ ಕುಟುಂಬವು ವೆದಲಿನಿಂದಲೂ ಶ್ರೀ ಮಠದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿತ್ತು. ನಮ್ಮೊಂದಿಗೂ ನಿಕಟ ಸಂಪರ್ಕ ಹೊಂದಿದ್ದ ಕುಟುಂಬ ವರ್ಗದವರು, ತಮ್ಮ ಮನೆಯಲ್ಲಿ ಏನೇ ಒಂದು ಚಿಕ್ಕ ಕಾರ್ಯಕ್ರಮ ಮಾಡಬೇಕೆಂದರೂ ನಮ್ಮ ಅಪ್ಪಣೆಯನ್ನು ಪಡೆದೇ ಮಾಡುತ್ತಿದ್ದರು. ಪ್ರತಿ 6 ತಿಂಗಳಿಗೊಮ್ಮೆ ಶ್ರೀಮಠಕ್ಕೆ ಬಂದು ನಮ್ಮನ್ನು ಭೇಟಿಯಾಗಿ ಹೋಗುತ್ತಿದ್ದರು ಎಂದು ಕಣ್ಣೀರಾದರು.

ಸುದ್ದಿ ತಿಳಿಯುತ್ತಲೇ ರೋಣ ಶಾಸಕ ಜಿ.ಎಸ್ ಪಾಟೀಲರು ತಕ್ಷಣ ಸ್ಪಂದಿಸಿ, ಸಹಾಯಕ್ಕೆ ಧಾವಿಸಿದ್ದು ಅವರ ಮಾನವೀಯತೆಗೆ ಸಾಕ್ಷಿ ಎಂದು ಅಜ್ಜನವರು ಹೇಳಿದರು. ತಮ್ಮ ಕೆಲಸಗಳನ್ನು ಬಿಟ್ಟು ಇಲ್ಲಿಗೆ ಬಂದು ನಿಂತು ಮುಂದಿನ ಎಲ್ಲ ವ್ಯವಸ್ಥೆಗಳನ್ನು ಮಾಡುತ್ತಿರುವ ಶಾಸಕ ಪಾಟೀಲರಿಗೆ ಖಂಡಿತವಾಗಿ ಜ. ಫಕೀರೇಶ ಅನುಗ್ರಹಿಸುತ್ತಾನೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರು, ಮಾಜಿ ಶಾಸಕ ಡಿ.ಆರ್ ಪಾಟೀಲರು ಮತ್ತು ಸಮಸ್ತ ಪೊಲೀಸ್ ಸಿಬ್ಬಂದಿಯ ಸಹಾಯ-ಸಹಕಾರವನ್ನು ಮರೆಯುವಂತಿಲ್ಲ ಎಂದು ಜಗದ್ಗುರುಗಳು ಹೇಳಿದರು. ವಿಷಯ ತಿಳಿದ ತಕ್ಷಣವೆ ಹಾಲಕೆರೆ ಪೀಠದ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರೂ ಸಹ ತಮ್ಮ ಸಿಬ್ಬಂದಿಯವರನ್ನು ಮತ್ತು ವಿದ್ಯಾರ್ಥಿಗಳನ್ನು ಸ್ಥಳಕ್ಕೆ ಕಳಿಸಿ ಮಹದುಪಕಾರ ಮಾಡಿದ್ದಾರೆ ಎಂದು ಶ್ರೀಗಳು ಸ್ಮರಿಸಿದರು.

ಮೃತರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ನೀಡಲಿ ಎಂದು ಹೇಳಿ, ತಾವು ಆ ಕುಟುಂಬಕ್ಕೆ ಬೆನ್ನೆಲುಬಾಗಿ ನಿಲ್ಲುತ್ತೇನೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಜಿ.ಎಸ್ ಪಾಟೀಲ, ಡಾ. ಕೆ.ಬಿ ಧನ್ನೂರ ಉಪಸ್ಥಿತರಿದ್ದರು.

## ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ ಪರಿಹಾರ: ಶಾಸಕ ಜಿ.ಎಸ್ ಪಾಟೀಲ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲ ಹೊರ ವಲಯದಲ್ಲಿ ಸೋಮವಾರ ನಡೆದ ಭೀಕರ ರಸ್ತೆ ಅಪಘಾತದಲ್ಲಿ 6 ಜನ ಮೃತರಾಗಿದ್ದನ್ನು ಕೇಳಿ ನನ್ನ ಮನಸ್ಸಿಗೆ ಅತೀವ ನೋವಾಗಿದೆ. ಮೃತರ ಕುಟುಂಬಕ್ಕೆ ಈ ನೋವನ್ನು ಭರಿಸುವ ಶಕ್ತಿಯನ್ನು ಕೊಡು ಎಂದು ಭಗವಂತನಲ್ಲಿ ಬೇಡುತ್ತೇನೆ ಮತ್ತು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲು ಪ್ರಾರ್ಥಿಸುತ್ತೇನೆ ಎಂದು ರೋಣ ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ನರೇಗಲ್ಲ ಹೊರ ವಲಯದಲ್ಲಿ ನಡೆದ ಭೀಕರ ಅಪಘಾತದ ಸುದ್ದಿ ಕೇಳುತ್ತಲೇ ನರೇಗಲ್ಲಿಗೆ ಧಾವಿಸಿದ ಶಾಸಕ ಜಿ.ಎಸ್ ಪಾಟೀಲರು, ಮುಂದಿನ ವ್ಯವಸ್ಥೆಗಳನ್ನು ಸೂಚಿಸಿ, ನರೇಗಲ್ಲ ಪೊಲೀಸ್ ಠಾಣೆಯಲ್ಲಿ ಈ ಮಾತುಗಳನ್ನು ಹೇಳಿದರು.

ಇಂತಹ ಅಪಘಾತದ ಬಗ್ಗೆ ನಮ್ಮ ಕ್ಷೇತ್ರದಲ್ಲಿ ಬಹಳಷ್ಟು ವರ್ಷಗಳಿಂದ ನಾವು ಕೇಳಿರಲಿಲ್ಲ. ಆದರೆ ದೂರದ ಪ್ರಯಾಣಿಕರು ಇಲ್ಲಿ ತಮ್ಮ ಜೀವವನ್ನು ಚೆಲ್ಲುವಂತಾದದ್ದು ತಮಗೆ ಅತೀವ ನೋವನ್ನುಂಟು ಮಾಡಿದೆ ಎಂದು ಶಾಸಕ ಪಾಟೀಲ ಕಂಬನಿ ಮಿಡಿದರು. ವಿಷಯ ತಿಳಿಯುತ್ತಲೇ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರೊಂದಿಗೆ ಮಾತನಾಡಿ, ಮೃತರ ಕುಟಂಬದವರಿಗೆ ಸೂಕ್ತ ಪರಿಹಾರ ನೀಡಲು ವಿನಂತಿಸಿದೆ. ತಕ್ಷಣ ಸ್ಪಂದಿಸಿದ ಮುಖ್ಯಮಂತ್ರಿಗಳು ಮೃತರಿಗೆ ತಲಾ 2 ಲಕ್ಷ ರೂ.ಗಳ ಪರಿಹಾರ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಕೆ.ಬಿ ಧನ್ನೂರ, ಪರಶುರಾಮಪ್ಪ ಅಳಗವಾಡಿ, ವಿ.ಬಿ ಸೋಮನಕಟ್ಟಿಮಠ, ನಿಂಗನಗೌಡ ಲಕ್ಕನಗೌಡ್ರ, ಯೂಸುಫ್ ಇಟಗಿ, ಎಂ.ಎಸ್ ದಢೇಸೂರಮಠ, ಶೇಕಪ್ಪ ಜುಟ್ಲ ಮುಂತಾದವರಿದ್ದರು.

### ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ

## ಅರ್ಥಪೂರ್ಣ ವಾಲ್ಮೀಕಿ ಜಯಂತಿ ಆಚರಣೆಗೆ ನಿರ್ಧಾರ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ



ಪಟ್ಟಣದಲ್ಲಿ ಅ.28ರಂದು ನಡೆಯುವ ತಾಲೂಕಾ ಮಟ್ಟದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕುರಿತು ಸೋಮವಾರ ಪಟ್ಟಣದ ಪುರಸಭೆ ಸಭಾ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ ಕೈಗೊಳ್ಳಲಾಯಿತು.

ಈ ವೇಳೆ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಮಾತನಾಡಿ, ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಮಾಜದ ಬಾಂಧವರು ನೀಡುವ ಸಲಹೆ, ಸೂಚನೆಗಳನ್ನು ಸ್ವೀಕರಿಸುವುದರ ಜತೆಗೆ ಕಾರ್ಯಕ್ರಮ ಯಶಸ್ಸಿಗೆ ತಾಲೂಕಾಡಳಿತದಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗುವುದು. ಅ.28ರಂದು ಬೆಳಿಗ್ಗೆ ಇಲ್ಲಿನ ಗವಿಮಠದಿಂದ ವಿವಿಧ ಕಲಾ ತಂಡಗಳು ಹಾಗೂ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದೊಂದಿಗೆ ಆರಂಭವಾಗುವ ಮೆರವಣಿಗೆಯು ಗದಗ ರಸ್ತೆ ಮಾರ್ಗವಾಗಿ ಡಾ.ಬಾಬುಜಗಜೀವನರಾಂ ಸಭಾ ಭವನ ತಲುಪಲಿದ್ದು, ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ತಾಲೂಕಿನ ವಿವಿಧ ಗ್ರಾಮಗಳಿಂದ 1 ಸಾವಿರಕ್ಕೂ ಅಧಿಕ ಜನ ಆಗಮಿಸಲಿದ್ದು, ಉಪನ್ಯಾಸಕರಾಗಿ ಪ್ರಕಾಶ ತಳವಾರ, ಎಂ.ಸಿ ಹುಲ್ಲಣ್ಣವರ ಆಗಮಿಸಲಿದ್ದಾರೆ ಎಂಬ ಸಲಹೆ-ಸೂಚನೆಗಳ ಜೊತೆಗೆ 2013ರಲ್ಲಿ ಗಜೇಂದ್ರಗಡ ವಾಲ್ಮೀಕಿ ಸಮುದಾಯ ಭವನಕ್ಕೆ ಅಂದು ಸಿದ್ದರಾಮಯ್ಯ ಅವರು ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಅಡಿಗಲ್ಲು ಮಾಡಿದ್ದರು. ಆದರೆ ಈವರೆಗೂ ಸಹ ಸಮುದಾಯ ಭವನ ನಿರ್ಮಾಣವಾಗಿಲ್ಲ. ಸೂಕ್ತ ಅನುದಾನ ಬಿಡುಗಡೆ ಮಾಡುವುದರೊಂದಿಗೆ ತಾಲೂಕಿನಲ್ಲಿ ಅರ್ಧಕ್ಕೆ ನಿಂತಿರುವ ವಾಲ್ಮೀಕಿ ಸಮುದಾಯ ಭವನ ಕಾಮಗಾರಿ ಪೂರ್ಣಗೊಳಿಸಲು ಆಡಳಿತ ಮುಂದಾಗಬೇಕು ಎಂದು ಸಭೆಯಲ್ಲಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಸಮಾಜದ ತಾಲೂಕಾಧ್ಯಕ್ಷ ಹನಮಂತಪ್ಪ ಹಟ್ಟಿಮನಿ, ಪುರಸಭೆ ಸದಸ್ಯ ಶರಣಪ್ಪ ಉಪ್ಪಿನಬೆಟಗೇರಿ, ತಾ.ಪಂ ಇಓ ಡಾ. ಡಿ.ಮೋಹನ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಮುಖಂಡರಾದ ಎಚ್.ಬಿ ತಳವಾರ, ಎಂ.ಎಚ್ ರಂಗಣ್ಣವರ, ಲೋಕಣ್ಣ ತಳವಾರ, ಶಿವನಗೌಡ ಪಾಟೀಲ, ಯಮನಪ್ಪ ತಳವಾರ, ಚಂದಪ್ಪ ಗುಡದೂರ, ಎಸ್.ಎಚ್ ಹಟ್ಟಿಮನಿ, ಲಕ್ಷ್ಮಣ ತಳವಾರ, ಹನಮಂತಪ್ಪ ಪೂಜಾರ, ಪರಶುರಾಮ ತಳವಾರ, ಮುತ್ತಣ್ಣ ಲ್ಯಾವಕ್ಕಿ, ಶಾಂತಪ್ಪ ಹಟ್ಟಿಮನಿ, ಬಾಲಚಂದ್ರ ವಾಲ್ಮೀಕಿ, ರಾಜಕುಮಾರ ಕೋನಣ್ಣವರ ಸೇರಿ ತಾಲೂಕಾ ಮಟ್ಟದ ವಿವಿಧ ಅಧಿಕಾರಿಗಳು ಇದ್ದರು.

ಸಮಾಜದ ಮುಖಂಡರ ಅಭಿಪ್ರಾಯವನ್ನು ಆಲಿಸಿದ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ಅರ್ಧಕ್ಕೆ ನಿಂತಿರುವ ವಾಲ್ಮೀಕಿ ಭವನ ನಿರ್ಮಾಣದ ವಸ್ತುಸ್ಥಿತಿಯ ಪಟ್ಟಿಯ ಅರ್ಜಿಯನ್ನು ಕಚೇರಿಯ ಕಾರ್ಯಾಲಯಕ್ಕೆ ನೀಡಿ, ಮುಂದಿನ ವರ್ಷದ ವಾಲ್ಮೀಕಿ ಜಯಂತಿ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

## ಕೆವಿಜಿ ಬ್ಯಾಂಕ್ ಸ್ಥಳಾಂತರಕ್ಕೆ ಮನವಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಕೆವಿಜಿ ಬ್ಯಾಂಕ್ ಕಛೇರಿ ತುಂಬಾ ಚಿಕ್ಕದಾಗಿದ್ದು, ರೈತರಿಗೆ, ವೃದ್ಧರಿಗೆ ತೊಂದರೆ-ಯಾಗುತ್ತಿದೆ. ಅಲ್ಲದೆ, ವಾಹನ ನಿಲುಗಡೆಗೆ ಸ್ಥಳಾವಕಾಶ ಇಲ್ಲದಿರುವುದರಿಂದ ಕೂಡಲೇ ಕೆವಿಜಿ ಬ್ಯಾಂಕ್‌ನ್ನು ವಿಶಾಲವಾದ ಸ್ಥಳವಿರುವ ಕಟ್ಟಡಕ್ಕೆ ಸ್ಥಳಾಂತರ ಮಾಡಬೇಕು ಎಂದು ಮುಳಗುಂದ ರೈತ ಸಂಘಟನೆಯಿಂದ ಬ್ಯಾಂಕ್ ಮ್ಯಾನೇಜರ್ ಎಸ್.ಕೆ ಕೋಡಿಹಳ್ಳಿ ಅವರಿಗೆ ಮನವಿ ನಿಡಲಾಯಿತು.

ಸಂಘದ ಅಧ್ಯಕ್ಷ ಬಸವರಾಜ ಕರಿಗಾರ, ಕಿರಣ ಕುಲಕರ್ಣಿ, ಮುತ್ತಪ್ಪ ಪಲ್ಲೇದ, ಗುಡುಸಾಬ ಗಾಡಿ, ದೇವರಾಜ ಸಂಗನಪೇಟಿ, ದೇವಪ್ಪ ಅಣ್ಣಿಗೇರಿ, ಮುತ್ತಪ್ಪ ಬಳ್ಳಾರಿ, ರೈತ ಸಂಘದ ಸರ್ವ ಸದಸ್ಯರು ಇದ್ದರು.

## ಕನ್ನಡ ಹೋರಾಟಗಾರರಿಂದ ದೆಹಲಿ ಚಲೋ, ಅಕ್ಟೋಬರ್ 18ರಂದು ದೆಹಲಿಯಲ್ಲಿ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳು 'ದೆಹಲಿ ಚಲೋ' ಕಾರ್ಯಕ್ರಮಕ್ಕೆ ಕರೆ ನೀಡಿವೆ. ಅಕ್ಟೋಬರ್ 18ರಂದು ಜಂತರ್ ಮಂತರ್‌ನಲ್ಲಿ ಕನ್ನಡ ಹೋರಾಟಗಾರರು ಪ್ರತಿಭಟನೆ ನಡೆಸಲಿದ್ದಾರೆ.

ಮಂಗಳವಾರ ಕನ್ನಡಪರ ಹೋರಾಟಗಾರರು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣ ಗೌಡ ಅವರೊಂದಿಗೆ ಬೆಂಗಳೂರಿನಿಂದ ರೈಲು ಮತ್ತು ವಿಮಾನದ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ಕನ್ನಡಪರ ಹೋರಾಟಗಾರರೊಂದಿಗೆ ದೆಹಲಿ ಕನ್ನಡ ಸಂಘ ಕೂಡ ಸೇರಲಿದೆ.

ಕಾವೇರಿ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ಕೋರಲು ಪ್ರಧಾನಿ ನರೇಂದ್ರ ಮೋದಿಯವರ ಭೇಟಿಗಾಗಿ ಸಮಯ ಕೇಳಿದ್ದಾರೆ.


ನಾರಾಯಣ ಗೌಡ ಮತ್ತು ದೆಹಲಿ ಕನ್ನಡ ಸಂಘದ ಅಧ್ಯಕ್ಷ ನಾಗರಾಜ್ ಅವರ ಮನವಿಗೆ ಪಿಎಂಒ ಸಕಾರಾತ್ಮಕವಾಗಿ ಸ್ಪಂದಿಸಿದ್ದರಿಂದ ಅಕ್ಟೋಬರ್ 18ರಂದು ಸಂಜೆ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅವರು ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಸಹ ಭೇಟಿಯಾಗಲಿದ್ದಾರೆ.

ಜಲಾಶಯಗಳಲ್ಲಿ ಕಡಿಮೆ ನೀರಿನ ಸಂಗ್ರಹವಿದ್ದು, ಬೇಸಿಗೆಯಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಕೆಯ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂಬ ರಾಜ್ಯದ ಮನವಿಯ ಹೊರತಾಗಿಯೂ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 3,000 ಕ್ಯೂಸೆಕ್ ನೀರು ಬಿಡುವಂತೆ ಕರ್ನಾಟಕಕ್ಕೆ ಆದೇಶಿಸಿದೆ.

## ಎ.ಎಸ್ ಮಕಾನದಾರರ ಕವಿತೆಗೆ ಪ್ರಥಮ ಸ್ಥಾನ

■ವಿಜಯಸಾಕ್ಷಿ ಸುದ್ದಿ, ಗದಗ



ಪ್ರಸಕ್ತ ಸಾಲಿನ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯ ನಿಮಿತ್ತ ಕರ್ನಾಟಕ ಬುಕ್ ಪ್ಯಾಲೇಸ್ ಕೆ.ಬಿ.ಪಿ ಗಾಂಧಿ ಜಯಂತಿ ಸಾಹಿತ್ಯ ಸಂಚಿಕೆ ಮಾಲಿಕೆ ಅಡಿಯಲ್ಲಿ ಏರ್ಪಡಿಸಿದ್ದ ಕವನ ರಚನೆ ಸ್ಪರ್ಧೆಯಲ್ಲಿ ಹಿರಿಯ ಕವಿ ಎ.ಎಸ್ ಮಕಾನದಾರ ಪ್ರಥಮ ಸ್ಥಾನ, ಆಶಾ ಎಲ್.ಎಸ್ ದ್ವಿತೀಯ, ಯುವ ಕವಿ ಹುಸೇನ್ ಸಾಬ ವಣಗೇರಿ ತೃತೀಯ ಸ್ಥಾನ ಪಡೆದಿದ್ದಾರೆ.

ಉಷಾ ಪ್ರಶಾಂತ್, ದೀಪಾಲಿ ಸಾಮಂತ, ಸಂಜಯ್ ಜಿ.ಕುರಣೆಯವರ ಕವಿತೆಗಳು ಮೆಚ್ಚುಗೆ ಪಡೆದಿವೆ ಎಂದು ಸ್ಪರ್ಧೆಯ ಸಂಚಾಲಕ ಡಾ. ಮೈನುದ್ದೀನ್ ರೇವಡಿಗಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದು, ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಕವಿಗಳಿಗೆ ಮತ್ತು ಮೆಚ್ಚುಗೆ ಪಡೆದ ಕವಿಗಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka